| LESS:- WEB SITE DONATION TREATED AS INCOME IN LAST YEAR | | 9000.00 |
| **BALANCE AS ON 31.03.2004** | | **1247167.50** |
| **HOSTEL MAIN. FUND** | | |
| AS PER LAST BALANCE SHEET | | 241255.27 |
| ADD:- ADDITIONS DURING YEAR | | 34000.00 |
| **BALANCE AS ON 31.03.2004** | | **275255.27** |
| **LOAN SCHOLARSHIP FUND** | | |
| AS PER LAST BALANCE SHEET | | 316999.64 |
| ADD: ADDITIONS DURING YEAR | | 2500.00 |
| **BALANCE AS ON 31.03.2004** | | **319499.64** |
| **VARTHA FUND** | | |
| AS PER LAST BALANCE SHEET | | 52032.16 |
| ADD: ADDITIONS DURING YEAR | | 1001.00 |
| **BALANCE AS ON 31.03.2004** | | **53033.16** |
| **DESTITUTE FUND ACCOUNTS** | | |
| AS PER LAST BALANCE SHEET | | 722858.55 |
| ADD: ADDITIONS DURING YEAR | | |
| S. V. SRINIVASAIAH | 1250 | |
| ANAMIKA | 383 | |
| R.K.A. SUBRAMANYA | 5000 | |

| PARTICULARS | | AMOUNT |
|---|---|---|
| B. S. JAGANNATHA | 200 | |
| S. C. MANJUNATH | 200 | |
| ANITHA | 750 | |
| B. S. NARAYANA SWAMY | 1500 | |
| M. NARASIMHAN | 10000 | |
| SUBBAMMA SRINIVASAIAH | 1000 | |
| | | 202.83 |
| **BALANCE AS ON 31.03.2004** | | **743141.55** |
| **LIFE MEMBERSHIP ACCOUNT** | | |
| AS PER LAST BALANCE SHEET | | 210792.66 |
| ADD:- LIFE MEMBERSHIP COMPLETED | | 9317.00 |
| **BALANCE AS ON 31.03.2004** | | **220109.66** |
| **GENERAL SCHOLARSHIP FUND** | | |
| AS PER LAST BALANCE SHEET | | 683987.77 |
| ADDITIONS DURING YEAR | | |
| S. V. SRINIVASIAH | 1250 | |
| H.S. SUBBA RAO, S. PRAKASH & USHA | 2000 | |
| R. VAIDYANATHAN | 251 | |
| Dr.R.S. JAYASHREE | 2000 | |
| H.S. RAMPRAKASH | 2000 | |
| R.N. SUNDARESH | 4000 | |
| P.SHAMRAO KASHYAP | 7000 | |
| CHARITABLE TR. | | 18501 |
| **BALANCE AS ON 31.03.2004** | | **702488.77** |

# ಸಂಕೇತಿ ವಾರ್ತಾ

# ಕಾರ್ಯದರ್ಶಿ ಕಾಲಂ



ಹಲವಾರು ಸಲ ಈ ಬಗ್ಗೆ ತಮ್ಮೆಲ್ಲರನ್ನೂ ಕೇಳಿಕೊಂಡಿದ್ದೇವೆ - ನಿಮ್ಮಲ್ಲಿ ನಡೆಯುವ ಸಮಾರಂಭಗಳ ಬಗ್ಗೆ ಮುಂಚಿತವಾಗಿ ಸಂಘಕ್ಕೆ ಮಾಹಿತಿ ನೀಡಿ ಎಂದು. ಆದಾಗ್ಯೂ ಅನೇಕ ಬಾಂಧವರು ಈ ವಿಷಯದಲ್ಲಿ ಹೆಚ್ಚಿನ ಆಸ್ಥೆ ವಹಿಸಿದಂತೆ ಕಾಣುವುದಿಲ್ಲ. ಸಭಾ ತಾಂಬೂಲವನ್ನು ಕಳುಹಿಸುವುದು ಒಂದು ಬಗೆ - ಆದರೆ ದಯಮಾಡಿ ಮುಂಚಿತವಾಗಿ ವಿಷಯ ತಿಳಿಸಿ - ಏಕೆಂದರೆ ಸಂಘವು ನೀಡುವ ಫಲಕಕ್ಕೆ ಹೆಚ್ಚು ಅರ್ಥ ಬರುವುದೇ ಅದನ್ನು ಸಂದರ್ಭಕ್ಕೆ ಸರಿಯಾಗಿ ನೀಡುವುದರಿಂದ. ದಯವಿಟ್ಟು ಸಹೃದಯರು ಇದರ ಬಗ್ಗೆ ಆಸಕ್ತಿವಹಿಸಬೇಕಾಗಿ ಕೋರುತ್ತೇನೆ.

ಬೆಂಗಳೂರು ಶಾಖೆಯ ಕಾರ್ಯಕ್ರಮಗಳು ಈ ವರ್ಷದಲ್ಲಿ ಹಲವಾರು ನಡೆದಿದೆ. ಪ್ರತಿಯೊಂದೂ ವಿಶಿಷ್ಟವೂ ಅತ್ಯಂತ ಯಶಸ್ವಿಯೂ ಆಗಿದೆ. ಸಂಕೇತಿ ಬಾಂಧವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಭೆಗಳಿಗೆ ಆಕರ್ಷಿಸುವುದೂ ಇವುಗಳಿಂದ ಸಾಧ್ಯವಾಗಿದೆ. ಇತ್ತೀಚೆಗಷ್ಟೇ ಅದು ತನ್ನ ಸರ್ವಸದಸ್ಯರ ಸಭೆ ನಡೆಸಿ, ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿದೆ. ನೂತನ ಕಾರ್ಯಕಾರಿ ಸಮಿತಿಯನ್ನು ಅಭಿನಂದಿಸುತ್ತಾ ಉತ್ತಮ ಕಾರ್ಯಗಳು ನಡೆಯುತ್ತಾ ಹೋಗಲಿ ಎಂದು ಬಯಸುತ್ತೇನೆ.

ಈ ಶಾಖೆಯಂತೆಯೇ ಮೈಸೂರಿನ ಶಾಖೆಯೂ ಆದಷ್ಟು ಬೇಗ ಸರ್ವಸದಸ್ಯರ ಸಭೆಯನ್ನು ನಡೆಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ವ್ಯವಸ್ಥಿತ, ಕ್ರಮಬದ್ಧ ಕಾರ್ಯನಿರ್ವಹಣೆಯಿಂದ ಬಾಂಧವರ ಮೆಚ್ಚುಗೆಗೆ ಪಾತ್ರರಾಗಿ, ಒಳ್ಳೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮುಂದಾಗಿ, ಸಾಮರಸ್ಯವನ್ನು ಸಾಧಿಸಿ ಎಂದು ನಾನು ಮೈಸೂರಿನ ಶಾಖಾ ಕಾರ್ಯಕಾರಿ ಸಮಿತಿಯನ್ನು ವಿನಂತಿಸುತ್ತೇನೆ.

**- ಆರ್. ಎಸ್. ಭಾಸ್ಕರ ಅವಧಾನಿ**

# ಶುಭ ಸಮಾಚಾರಗಳು

## ಹುಟ್ಟುಹಬ್ಬ

| ತಾರೀಖು | ಹೆಸರು |
|---|---|
| 07.11.04 ಬೆಂಗಳೂರು | **ಚಿ॥ ಅಂಜನಾ (ಗೌರಿ)** (ಶ್ರೀಮತಿ ರಾಧಾ ಮತ್ತು ಶ್ರೀ ಶ್ರೀ ಚಂದ್ರ ಆತ್ರೇಯ ಅವರ ಪುತ್ರಿ) (ಮುಂಬಯಿಯಲ್ಲಿರುವ ಶ್ರೀಮತಿ ಸಾವಿತ್ರಿ ಮತ್ತು ಶ್ರೀ ಆರ್.ಜಿ. ಎನ್. ಸ್ವಾಮಿ ಅವರ ಮೊಮ್ಮಗಳು) |

## ಚೂಡಾಕರ್ಮ

| ತಾರೀಖು | ಹೆಸರು |
|---|---|
| 28.11.04 ಬೆಂಗಳೂರು | **ಚಿ॥ ಆರ್. ನಿತಿನ್ ಕುಮಾರ್** (ಶ್ರೀಮತಿ ಮಮತಾ ಮತ್ತು ಶ್ರೀ ಆರ್. ರಮೇಶ್ ಅವರ ಪುತ್ರ) (ಶ್ರೀಮತಿ ಭಾಗ್ಯಲಕ್ಷ್ಮಿ ಮತ್ತು ಜಿ. ರಾಮಚಂದ್ರ ಹಾಗೂ ಶ್ರೀ ಬಿ.ಆರ್. ನರಸಿಂಹಮೂರ್ತಿ ಅವರ ಮೊಮ್ಮಗ) |

## ಗೃಹಪ್ರವೇಶ

| ತಾರೀಖು | ಹೆಸರು |
|---|---|
| 18.11.04 ಬೆಂಗಳೂರು | **ಶ್ರೀಮತಿ ಸರಸ್ವತಿ ಮತ್ತು ಶ್ರೀ ಆರ್. ಲಕ್ಷ್ಮೀನಾರಾಯಣ** |
| 21.11.04 ಮೈಸೂರು | **ಶ್ರೀಮತಿ ಪದ್ಮಿನಿ ಮತ್ತು ಶ್ರೀ ಎಂ. ಆರ್. ಶ್ರೀಕಂಠನ್** |
| 05.11.04 ಬೆಂಗಳೂರು | **ಶ್ರೀಮತಿ ರಮಾ ಮತ್ತು ಡಾ॥ ಆರ್. ಎನ್. ತ್ಯಾಗರಾಜನ್** |





## ವಿವಾಹ ಮಹೋತ್ಸವ

| ತಾರೀಖು | ವಧು | ವರ |
|---|---|---|
| 31.10.04 ಮೈಸೂರು | **ಚಿ॥ ಸೌ॥ ಹೆಚ್.ಕೆ. ಶ್ರೀದೇವಿ** (ಶ್ರೀಮತಿ ಸುಮಿತ್ರಾ ಮತ್ತು ಶ್ರೀ ಹೆಚ್.ಆರ್. ಕೃಷ್ಣಮೂರ್ತಿ ಅವರ ಪುತ್ರಿ) | **ಚಿ॥ ರಾ॥ ಹೆಚ್.ವಿ. ಶ್ರೀನಾಥ್** (ಶ್ರೀಮತಿ ಮತ್ತು ಶ್ರೀ ವೆಂಕಟೇಶ್ (ಹಾಸನ) ಇವರ ಪುತ್ರ) |
| 04.11.04 ಬೆಂಗಳೂರು | **ಚಿ॥ ಸೌ॥ ಆರ್. ಕೆ. ಕಾಂಚನಾ** (ಶ್ರೀಮತಿ ಕುಮುದಿನಿ ಮತ್ತು ಶ್ರೀ ಆರ್. ಕೆ. ಕುಮಾರ್ ಅವರ ಪುತ್ರಿ) | **ಚಿ॥ ರಾ॥ ಎಂ. ವೈ. ರವಿ** (ಶ್ರೀಮತಿ ರೇಖಾ ಮತ್ತು ಶ್ರೀ ಎಂ. ಯದುಮೂರ್ತಿ ಅವರ ಪುತ್ರ) |
| 07.11.04 ಮೈಸೂರು | **ಚಿ॥ ಸೌ॥ ಎಸ್. ಮೀನಾ** (ಶ್ರೀಮತಿ ಅಂಬಾ ಮತ್ತು ಶ್ರೀ ಶ್ರೀಕಂಠನ್ ಅವರ ಪುತ್ರಿ | **ಚಿ॥ ರಾ॥ ಆರ್. ವಿ. ಪ್ರಸನ್ನ** (ದಿ॥ ಶ್ರೀಮತಿ ಭಾಗ್ಯ ಮತ್ತು ಶ್ರೀ ಆರ್. ಕೆ. ವೆಂಕಟಕೃಷ್ಣಯ್ಯ ಅವರ ಪುತ್ರ |
| 07.11.04 ಮೈಸೂರು | **ಚಿ॥ ಸೌ॥ ಅನೂಷಾರಾವ್** (ಡಾ॥ ಮನೋನ್ಮಣಿ ಮತ್ತು ಶ್ರೀ ಬಿ. ವಿ. ರಾಮಕೃಷ್ಣರಾವ್ ಅವರ ಪುತ್ರಿ) | **ಚಿ॥ ರಾ॥ ಹೆಚ್. ಎಸ್. ನಾಗೇಶ್** (ಶ್ರೀಮತಿ ಆರ್. ವಿ. ರಾಜಲಕ್ಷ್ಮಿ ಮತ್ತು ಶ್ರೀ ಹೆಚ್. ಎನ್. ಸೀತಾರಾಮಯ್ಯ ಅವರ ಪುತ್ರ) |
| 14.11.04 ಮೈಸೂರು | **ಚಿ॥ ಸೌ॥ ಸಂಜನಾ (ಅನ್ನಿ)** | **ಚಿ॥ ರಾ॥ ಸಂದೀಪ್** (ಶ್ರೀಮತಿ ರೇಣುಕಾ ಮತ್ತು ಶ್ರೀ ಎಸ್. ಎನ್. ಮೂರ್ತಿ ಅವರ ಪುತ್ರ) |
| 22.11.04 ಮೈಸೂರು | **ಚಿ॥ ಸೌ॥ ಕನ್ಯಾ ಭಾರದ್ವಾಜ** (ಶ್ರೀಮತಿ ಮತ್ತು ಶ್ರೀ ನರಸಿಂಹ ಮೂರ್ತಿ ಅವರ ಪುತ್ರಿ) | **ಚಿ॥ ರಾ॥ ಕೆ. ಅರವಿಂದ** (ಶ್ರೀಮತಿ ಮತ್ತು ಶ್ರೀ ಕೇಶವ ಚಂದ್ರ ಅವರ ಪುತ್ರ) |

| | | |
|---|---|---|
| 28.11.04<br>ಬೆಂಗಳೂರು | **ಚಿ॥ಸೌ॥ ಹೆಚ್.ಎಸ್. ಸುಮಾ**<br>(ಶ್ರೀಮತಿ ನಾಗಲಕ್ಷ್ಮಿ ಮತ್ತು ಶ್ರೀ ಹೆಚ್. ವಿ. ಶ್ರೀನಿವಾಸಮೂರ್ತಿ ಅವರ ಪುತ್ರಿ) | **ಚಿ॥ರಾ॥ ಫಣೀಶ್ ಕೆ. ಭಾರದ್ವಾಜ್**<br>(ಶ್ರೀಮತಿ ವೈದೇಹಿ ಮತ್ತು ಶ್ರೀ ಆರ್. ಎನ್. ಕುಮಾರಸ್ವಾಮಿ ಅವರ ಪುತ್ರ) |
| 28.11.04<br>ಬೆಂಗಳೂರು | **ಚಿ॥ಸೌ॥ ಬಿ.ಆರ್. ಸೌಮ್ಯ**<br>(ಶ್ರೀಮತಿ ಶಶಿಕಲಾ ಮತ್ತು ದಿ॥ ಶ್ರೀ ಬಿ.ಎಸ್. ರಘು ಅವರ ಪುತ್ರಿ) | **ಚಿ॥ರಾ॥ ಎಸ್.ಎಂ. ಸುದರ್ಶನ್**<br>(ಶ್ರೀಮತಿ ಪ್ರಭಾವತಿ ಮತ್ತು ಶ್ರೀ ಎಸ್. ಆರ್. ಮಾರ್ಕಂಡೇಯ ಅವರ ಪುತ್ರ) |

## ನವೆಂಬರ್ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಬಿ. ಎಸ್. ರಾಮಚಂದ್ರ | ಬೆಂಗಳೂರು | 7156 | 1820 |
| ಪರಿಮಳ ರಾಮಚಂದ್ರ | ಬೆಂಗಳೂರು | 7157 | 1821 |
| ಆರ್. ಸತ್ಯನಾರಾಯಣ | ಬೆಂಗಳೂರು | 7163 | 1822 |
| ಉಮಾ ಸತ್ಯನಾರಾಯಣ | ಬೆಂಗಳೂರು | 7164 | 1823 |

### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಡಾ॥ ಆರ್.ಎನ್.ತ್ಯಾಗರಾಜನ್ | ಬೆಂಗಳೂರು | 7155 | 101.00 (ಗೃಹಪ್ರವೇಶ) |
| ಆರ್. ಲಕ್ಷ್ಮೀನಾರಾಯಣ | ಬೆಂಗಳೂರು | 7165 | 101.00 (ಗೃಹಪ್ರವೇಶ) |
| ಬಿ. ಎಸ್. ಪ್ರಕಾಶ್ | ಬೆಂಗಳೂರು | 7166 | 101.00 (ಗೃಹಪ್ರವೇಶ) |
| ಆರ್.ಎನ್. ಕುಮಾರಸ್ವಾಮಿ | ನವದೆಹಲಿ | 7171 | 101.00 (ಮಗನ ಮದುವೆ) |
| ಎಸ್.ಆರ್. ಮಾರ್ಕಂಡೇಯ | ಬೆಂಗಳೂರು | 7172 | 201.00 (ಮಗನ ಮದುವೆ) |
| ಬಿ. ಎಸ್. ರಾಮಚಂದ್ರ | ಬೆಂಗಳೂರು | 7173 | 50.00 (ತಮ್ಮನ ಮಗಳ ಮದುವೆ) |
| ಹೆಚ್.ಆರ್. ಕೃಷ್ಣಮೂರ್ತಿ | ಮೈಸೂರು | 6969 | 101.00 (ಮಗಳ ಮದುವೆ) |
| ಬಿ.ಎಸ್.ಅನಂತನಾರಾಯಣ | ಮೈಸೂರು | 0113 | 101.00 (ಮಗಳ ಮದುವೆ) |





| | | | |
|---|---|---|---|
| ಎಸ್.ಎಂ. ಶ್ರೀಕಂಠನ್ | ಸಾಲಿಗ್ರಾಮ | 0114 | 101.00 (ಮಗಳ ಮದುವೆ) |
| ಎಂ.ಆರ್. ಶ್ರೀಕಂಠನ್ | ಮೈಸೂರು | 0115 | 101.00 (ಗೃಹಪ್ರವೇಶ) |
| ಬಿ.ಎಸ್. ನರಸಿಂಹಮೂರ್ತಿ | ಮೈಸೂರು | 0116 | 101.00 (ಮಗಳ ಮದುವೆ) |

### ಅಶಕ್ತ ಮಾಸಾಶನ ನಿಧಿ:

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಆರ್. ಕೆ. ಅನಂತಸುಬ್ರಹ್ಮಣ್ಯ | ಬೆಂಗಳೂರು | 7167 | 3,500.00 |

### ಹಾಸ್ಟೆಲ್ ಅನ್ನದಾನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ. ಎಸ್. ರಾಮಚಂದ್ರ | ಬೆಂಗಳೂರು | 7159 | 4,000.00 (ತಂದೆಯ ನೆನಪು) |
| ಬಿ. ಎಸ್. ರಾಮಚಂದ್ರ | ಬೆಂಗಳೂರು | 7160 | 4,000.00 (ತಾಯಿಯ ನೆನಪು) |
| ಸುಭದ್ರಾ ವಿ. ಸಾಲಿಗ್ರಾಂ | ಮುಂಬಯಿ | 7162 | 4,000.00 (ಪತಿಯ ನೆನಪು) |

### ಸಾಲರೂಪದ ವಿದ್ಯಾರ್ಥಿ ವೇತನದ ಮರುಪಾವತಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ದೀಪಶ್ರೀ ಗದ್ವಾಲ್ | ಮೈಸೂರು | 6971 | 2,000.00 |

### ವಾರ್ತಾ ಪೋಷಕರು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ.ಎಸ್. ರಾಮಚಂದ್ರ | ಬೆಂಗಳೂರು | 7158 | 1,000.00 |

### ನವೆಂಬರ್ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.11.04 ಮೈಸೂರು | ಸಾವಿತ್ರಮ್ಮ | ಅತ್ತೆ ಲಕ್ಷ್ಮೀದೇವಮ್ಮ |
| 01.11.04 ಮೈಸೂರು | ಶ್ರೀನಾಥ್ ಬಿ. ಆರ್. | ಹನಸೋಗೆ ಛೇರ್ಮನ್ ನರಸಿಂಹಯ್ಯ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.11.04 ಬೆಂಗಳೂರು | ಜ್ಯೋತಿ ಛಾರಿಟಬಲ್ ಟ್ರಸ್ಟ್ 6 ದಿನಗಳು | ಜ್ಯೋತಿ |
| 02.11.04 ಬೆಂಗಳೂರು | ಶ್ರೀನಿವಾಸ ರಾವ್ ಬಿ.ಎನ್. | ತಾಯಿ ಶ್ರೀಮತಿ ತಿಮ್ಮಾಜಮ್ಮ |
| 02.11.04 ಬೆಂಗಳೂರು | ಪ್ರಭಾವತಿ | ತಂದೆ ಎಸ್. ಎನ್. ನಾರಾಯಣ ಸ್ವಾಮಿ |
| 02.11.04 ಚೆನ್ನೈ | ರಾಮಚಂದ್ರ ಎಸ್. ಎನ್. | ತಂದೆ ಎಸ್. ಎನ್. ನಾರಾಯಣ ಸ್ವಾಮಿ |
| 05.11.04 ಬಾಂಬೆ | ಜಗದೀಶ್ ಆರ್. ಕೆ. | ತಂದೆ ಆರ್. ಎಂ. ರಾಮಕೃಷ್ಣಪ್ಪ |
| 06.11.04 ಬೆಂಗಳೂರು | ಕಮಲಾ ಪರಶುರಾಮ ರಾವ್ | ತಾಯಿ ಅಮ್ಮಯ್ಯ |
| 07.11.04 ಬೆಂಗಳೂರು | ಸುಬ್ರಹ್ಮಣ್ಯಂ ಬಿ.ಎನ್.ವಿ. | ಪುತ್ರಿ ಕುಮಾರಿ ಜ್ಯೋತಿ |
| 07.11.04 ಬೆಂಗಳೂರು | ಚಂಪಕ ಮಾಲಾ ಭಾಸ್ಕರ್ | ಪತಿ ಭಾಸ್ಕರ್ |
| 08.11.04 ಯು.ಎಸ್.ಎ. | ಶಿವಶಂಕರ್ ಮತ್ತು ವೈದೇಹಿ ಶಿವಶಂಕರ್ | ಮಗ ರಾಮ ಶಿವಶಂಕರ್ |
| 08.11.04 ಬಾಂಬೆ | ಸುಭದ್ರ ವೆಂಕಟ್ ಸಾಲಿಗ್ರಾಂ | ಪತಿ ವೆಂಕಟ್ ಕೆ. ಸಾಲಿಗ್ರಾಂ |
| 11.11.04 ನವದೆಹಲಿ | ರಾಮಸ್ವಾಮಿ ಬಿ. ಎಸ್. ಚಂದ್ರಶೇಖರ್ ಬಿ. ಎಸ್. | ತಾಯಿ ಶಾರದಮ್ಮನವರ ಹುಟ್ಟುಹಬ್ಬ |
| 13.11.04 ಬೆಂಗಳೂರು | ವೆಂಕಟರಾಮಯ್ಯ ಬಿ. ಎಸ್. | ತಾಯಿ ಸೀತಮ್ಮನವರ ಹುಟ್ಟುಹಬ್ಬ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 15.11.04 ಬೆಂಗಳೂರು | ಹೆಚ್.ಎಸ್. ಪುರುಷೋತ್ತಮ್ | ತಾಯಿ ಕೋಳೂರು ಚೆನ್ನಕ್ಕಯ್ಯ |
| 13.11.04 ಬೆಂಗಳೂರು | ರಾಧಾ ವಿಶ್ವನಾಥ್ | ತಾಯಿ ಸುಬ್ಬಮ್ಮ ಆರ್. ಎಸ್ |
| 14.11.04 ಬೆಂಗಳೂರು | ನಿರ್ಮಲಾ ರಾಧಾಕೃಷ್ಣ | ಮಾವ ಎನ್. ವೆಂಕಟ ರಾಮಯ್ಯ |
| 14.11.04 ಬೆಂಗಳೂರು | ನಟರಾಜ್. ವಿ. | ತಂದೆ ಎನ್. ವೆಂಕಟ ರಾಮಯ್ಯ |
| 16.11.04 ಬೆಂಗಳೂರು | ಮಲ್ಲಿಕಾರ್ಜುನ್ ಹೆಚ್.ವಿ. | ತಂದೆ ಹೆಚ್. ಎಸ್. ವೆಂಕಟಸುಬ್ಬಯ್ಯ |
| 17.11.04 ಬೆಂಗಳೂರು | ಮುರಳಿ ಆರ್. ಕೆ. | ತಂದೆ ಆರ್. ವಿ. ಕೃಷ್ಣಮೂರ್ತಿ |
| 17.11.04 ಪುಣೆ | ಸೀತಾರಾಮಯ್ಯ ಆರ್.ವಿ. | ತಾಯಿ ಪುಟ್ಟಮ್ಮ ವೆಂಕಟರಮಣಯ್ಯ |
| 17.11.04 ಬೆಂಗಳೂರು | ರವಿಶಂಕರ್ ಆರ್. ಕೆ. | ತಂದೆ ಆರ್. ವಿ. ಕೃಷ್ಣಮೂರ್ತಿ |
| 18.11.04 ಬೆಂಗಳೂರು | ಅವಧಾನಿ ಬಿ. ವಿ. ಟಿ. | ತಾಯಿ ತಾಯಕ್ಕ |
| 19.11.04 ಮೈಸೂರು | ಶಂಕರ ಆರ್., ಶಾರದಮ್ಮ ಸೀತಾ, ಸಾವಿತ್ರಮ್ಮ | ತಂದೆ ಆರ್. ಜಿ. ರಾಮಸ್ವಾಮಯ್ಯ |
| 19.11.04 ಬೆಂಗಳೂರು | ಆರ್.ಹೆಚ್. ಅಭಿಜಿತ್ | ತಾಯಿ ಹೆಚ್.ಸಿ. ನಾಗರತ್ನ |
| 20.11.04 ಬೆಂಗಳೂರು | ಆರ್.ಕೆ. ರಾಮರಾವ್ ಮತ್ತು ಆರ್. ಕೆ. ಸೂರ್ಯನಾರಾಯಣ | ತಾಯಿ ಸೀತಮ್ಮ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 23.11.04 ಬೆಂಗಳೂರು | ರತ್ನಮ್ಮ ಆರ್.ಎಸ್ | ತಾಯಿ ಕಾವೇರಮ್ಮ |
| 23.11.04 ಬೆಂಗಳೂರು | ಮೀರಾ ರವಿಶಂಕರ್, ಚಂದ್ರಶೇಖರ್ ಸಾಲಿಗ್ರಾಂ | ಅಜ್ಜ ಎಸ್.ಗಂಗಾಧರಯ್ಯ |
| 26.11.04 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ರಾಮನಾಥರ ಹುಟ್ಟುಹಬ್ಬ |
| 26.11.04 ಬೆಂಗಳೂರು | ಹೆಚ್.ಬಿ. ಶಾಂತಾರಾಮ್ | ತಮ್ಮ ಹೆಚ್.ಬಿ. ಸುಬ್ರಹ್ಮಣ್ಯ |
| 27.11.04 ಮೈಸೂರು | ಪಿ.ಎನ್. ಜಯರಾಮ್<br>ಪಿ.ಎನ್. ರವಿಶಂಕರ್ (ಯುಎಸ್ಎ)<br>ರಾಧಾ ಜಯರಾಂ (ಯುಎಸ್ಎ)<br>ನಂದಾ ಸುರೇಂದ್ರ (ಯುಎಸ್ಎ) | ಅಜ್ಜಿ ಪುಟ್ಟತಾಯಮ್ಮ |
| 27.11.04 ಮೈಸೂರು | ನಾಗರತ್ನ ನಾಗರಾಜ್ ಆರ್. | ವಿವಾಹದ ದಿನ |
| 29.11.04 ಬೆಂಗಳೂರು | ಪೃಥ್ವಿರಾಜ್ | ತಂದೆ ಬಿ.ವಿ.ಸುಬ್ಬರಾವ್ |
| 30.11.04 ಪುಣೆ | ಸೀತಾರಾಮಯ್ಯ ಆರ್. ವಿ. | ರುದ್ರಪಟ್ಟಣ ಕಾಂತಯ್ಯ ವೆಂಕಟರಮಣಯ್ಯ |
| 30.11.04 ದೆಹಲಿ | ಶ್ರೀಮತಿ ಜ್ಯೋತಿ ಶ್ರೀಧರ್ | ತಾಯಿ ನಾಗಲಕ್ಷ್ಮಿ ಆರ್ಎ(ಅನಂತಮೂರ್ತಿ ಯವರ ಪತ್ನಿ) |

## ಬದಲಾಗಿರುವ ದೂರವಾಣಿ ಸಂಖ್ಯೆಗಳು

**ಎಸ್. ಆರ್. ಕೌಸಲ್ಯಾಬಾಯಿ - 57721218**

**ಸರೋಜಾ ರಾಜ್ - 57721219**

**ಎಸ್. ಎಂ. ರವಿಶಂಕರ್ - 57721094**







## ಪ್ರತಿಭೆ

**ಚಿ|| ಹೆಚ್. ಎಸ್. ಶ್ರೀಕಾಂತ್, ಪ್ರಥಮ ದರ್ಜೆ B.D.S.**

ಕರ್ನಾಟಕ ಶಾಸ್ತ್ರೀಯ ಸಂಗೀತ - Junior ಮತ್ತು ಗಮಕದ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣ. BDS Part I ನಲ್ಲಿ ಫರೂಬಿ ಡೆಂಟಲ್ ಕಾಲೇಜಿನಲ್ಲಿಪ್ರಥಮ ದರ್ಜೆ ಪಡೆದ ಏಕೈಕ ವಿದ್ಯಾರ್ಥಿ.

ತಂದೆ : **ಹೆಚ್. ಆರ್. ಶ್ರೀವತ್ಸ**

ತಾಯಿ : **ಪದ್ಮಾ**

ಅಜ್ಜಂದಿರು : **ದಿ|| ಹನಸೋಗೆ ರಂಗಾಶಾಸ್ತ್ರಿ ಹಾಗೂ ದಿ|| ರುದ್ರಪಟ್ಟಣದ ಲಕ್ಷ್ಮೀಕಾಂತಯ್ಯ**



**ಚಿ|| ಆರ್. ಪಿ. ದಿವ್ಯಾ,**

**10th Std. CBSE 92.6%**

Winner of many prizes in Inter School Competitions.

ತಂದೆ : **ಎಸ್. ರವಿಪ್ರಕಾಶ್, ಚೆನ್ನೈ**

ತಾಯಿ : **ಶಾರದಾಂಬಾ ಆರ್. ಪಿ.**

ಅಜ್ಜ-ಅಜ್ಜಿ : **ಆರ್. ಕೆ. ಶ್ರೀನಿವಾಸನ್ ಮತ್ತು ಶಾಂತಲಕ್ಷ್ಮಿ (ಚೆನ್ನೈ)**
**ಬಿ. ವಿ. ಶ್ರೀಕಂಠ ಮತ್ತು ವೇದವತಿ (ಭದ್ರಾವತಿ)**

ಈರ್ವರನ್ನು ಸಂಘವು ಅಭಿನಂದಿಸುತ್ತದೆ.

**ಗಮನಿಸಿ :** ನವೆಂಬರ್ ಸಂಚಿಕೆಯ ಪ್ರತಿಭೆ ಅಂಕಣದಲ್ಲಿ ಚಿ|| ಡಿ. ಹರ್ಷ ಅವರ ತಾಯಿಯ ಹೆಸರು **ಸರ್ವಮಂಗಳಾ**

## ಸಮಾಚಾರ ಸಂಗ್ರಹ

<u>ಗುಜರಿ :</u> ಸಮಸ್ಯೆ ಮಾತ್ರ ಭರ್ಜರಿ ! (10, ನವೆಂಬರ್ 04; ಪಿಟಿಐ) ಯುಎನ್ಐ: ಗಾಜಿಯಾಬಾದ್ : ಮುಂಬಯಿ : ಬೆಂಗಳೂರು : ಕಛ್ : ಜೈಪುರ : ಬುಲಂದ್‌ಶಹರ್. ಇತ್ತೀಚೆಗೆ ನಮ್ಮ ದೇಶದಲ್ಲಿ ಯಾರು ಏನು ಬೇಕಾದರೂ ಮಾಡಬಹುದೆಂಬ ಭಾವನೆ ಬಂದುಬಿಟ್ಟಿದೆ. ಇರಾನ್‌ನಿಂದ ತರಿಸಿಕೊಂಡ ಉಕ್ಕು ತ್ಯಾಜ್ಯ ಪದಾರ್ಥಗಳ ಜೊತೆ ಸ್ಫೋಟಕಗಳೂ ಇದ್ದು ಬಡಜನರ ಸಾವು - ನೋವುಗಳಿಗೆ ಕಾರಣವಾಗಿದೆ. 600 ಸ್ಕಡ್ಸ್, ರಾಕೆಟ್‌ಬಾಂಬ್, ಮೋರ್ಟರ್ಸ್ ಪತ್ತೆಯಾಗಿದೆ. ಅವುಗಳಲ್ಲಿ 63 ಬಾಂಬುಗಳನ್ನು ನಿಷ್ಕ್ರಿಯಗೊಳಿಸಲಾಯಿತು. ಕೋಕಡ್ ಕೈಗಾರಿಕಾ ಪ್ರದೇಶದಲ್ಲಿ ಜಾಡಮಾಲಿಯೊಬ್ಬ ಒಳಚರಂಡಿಯನ್ನು ಶುದ್ಧಗೊಳಿಸುತ್ತಿದ್ದ ಸಂದರ್ಭದಲ್ಲಿ ಪತ್ತೆಯಾದುದನ್ನು ಪೋಲೀಸರಿಗೆ ತಿಳಿಸಿದಾಗ, ಅವರು ಮುಂದೆ ಆಗಲಿದ್ದ ಅನಾಹುತವನ್ನು ತಪ್ಪಿಸಿದರು. ಅಷ್ಟೇ ಅಲ್ಲದೆ ಪುನಃ ಯಾಕೋ ಅನುಮಾನ ಬಂದು ಇನ್ನೊಂದುಸಲ ಪೋಲೀಸರು ಧಾಳಿ ಮಾಡಿದಾಗ ಬೃಹತ್ ಪ್ರಮಾಣದ ವ್ಯರ್ಥ ಸ್ಫೋಟಕಗಳು ಪತ್ತೆಯಾದವು. ಪೋಲೀಸರ ಹೆದರಿಕೆಯಿಂದಾಗಿ ಇನ್ನೂ ಅಪಾರ ಪ್ರಮಾಣದ ಬಾಂಬ್ - ತ್ಯಾಜ್ಯ ವಸ್ತುಗಳನ್ನು ಉಕ್ಕಿನ ಕಾರ್ಖಾನೆಗಳು ಮರೆಮಾಚಿ ಇಟ್ಟಿವೆ. ಅವುಗಳು ಯಾವಾಗಲೋ ಸಿಡಿದರೆ ಏನು ಗತಿ ಎನ್ನುವ ಆತಂಕ ಜೈಪುರ ಪೋಲೀಸರದ್ದು. ಕಾರ್ಖಾನೆಗಳ ಮಾಲೀಕರಿಗೂ ಇದರ ಅರಿವಿರಲಿಲ್ಲ. ಆದರೆ ತಾವು ತರಿಸಿರುವ ಸ್ಕ್ರ್ಯಾಪ್ಸ್‌ನಲ್ಲಿ ಬಾಂಬ್‌ಗಳಿವೆ ಎನ್ನುವ ಸಂಗತಿ ತಿಳಿದ ತಕ್ಷಣ, ಅವುಗಳನ್ನು ಗಾಬರಿಯಿಂದಾಗಿ ಕಂಡಕಂಡ ಕಡೆಗಳಲ್ಲಿ ಬೇಕಾಬಿಟ್ಟಿ ಎಸೆದಾಡಿರುವುದು, ಸಮಸ್ಯೆಯು ಉಲ್ಬಣಿಸಲು ಕಾರಣವಾಗಿದೆ. ಇರಾನ್‌ನಿಂದ ತರಿಸಿಕೊಂಡಿರುವ ಸ್ಟೀಲ್ ಸ್ಕ್ರ್ಯಾಪ್ಸ್ ಈಗಾಗಲೇ ದೇಶದ ಎಲ್ಲಾ ಭಾಗಗಳಿಗೂ ಹರಿದು ಹೋಗಿಬಿಟ್ಟಿದೆ. ಕಾರ್ಖಾನೆಯ ಮಾಲೀಕರು ಸ್ಕ್ರ್ಯಾಪ್ಸ್ ತರಿಸಿಕೊಳ್ಳುವುದು ತೀರಾ ಸಾಮಾನ್ಯ ಸಂಗತಿ. ಆದರೆ ಆ ಸ್ಕ್ರ್ಯಾಪ್ಸ್‌ನಲ್ಲಿ ಅಸಹಜವಾದ ಪದಾರ್ಥಗಳನ್ನು ಕಂಡಾಗ ಅನುಮಾನ ಮೂಡಬೇಕು. ನಂತರ ಪೋಲೀಸರಿಗೆ ತಿಳಿಸಬೇಕು. ಹಾಗೆ ಮಾಡದೇ ಇದ್ದಾಗ ಅದು ಅಪರಾಧವಾಗುತ್ತದೆ. ಮುಂಬಯಿನ ಕಲಾಂಬೋಲಿಯಲ್ಲಿ 150 ಶೆಲ್ಸ್ ಹಾಗೂ 1000 ಸುತ್ತು ಮದ್ದುಗುಂಡುಗಳ ಬೃಹತ್ ಸಂಗ್ರಹವನ್ನು ವಶಪಡಿಸಿಕೊಂಡು ನಿಷ್ಕ್ರಿಯಗೊಳಿಸಲಾಗಿದೆ. ಬೆಂಗಳೂರು ವಿಮಾನ ನಿಲ್ದಾಣದ ಶೌಚಾಲಯದಲ್ಲಿ ಒಂದು ತಿಂಗಳ ಹಿಂದೆ ಮದ್ದುಗುಂಡುಗಳು ಪತ್ತೆಯಾಗಿದ್ದವು. ನಿಲ್ದಾಣದ ಮುಂಭಾಗದಲ್ಲಿಯೇ ಇದ್ದ ಲೋಹ ಶೋಧಕ ಯಂತ್ರವನ್ನೂ (Metal detector) ದಾಟಿ ಅವುಗಳು





ಒಳಗೆ ಬಂದದ್ದಾದರೂ ಹೇಗೆ ? ಬಂಗಾಳದ ಪುರುಲಿಯಾ ಪ್ರಕರಣವೇ ಮತ್ತೊಮ್ಮೆ ಮರುಕಳಿಸುತ್ತಿದೆಯೇ ? ಪುರುಲಿಯಾ ಪ್ರಕರಣ ನೆನಪಿದೆಯೇ? ಎಲ್ಲಿಂದಲೋ ಬಂದ ಒಂದು ಹೆಲಿಕಾಪ್ಟರ್ ಶಸ್ತ್ರಾಸ್ತ್ರಗಳನ್ನೂ , ಮದ್ದುಗುಂಡುಗಳನ್ನೂ ಉದುರಿಸುತ್ತಾ ಹೋಯಿತು. 20 ವರ್ಷಗಳಿಗೂ ಹೆಚ್ಚು ಕಾಲ ಕಳೆದ ವಿಚಾರಣೆಯು ಕಡೆಗೂ ಒಂದು ತರ್ಕಬದ್ಧವಾದ ಅಂತ್ಯವನ್ನು ಕಾಣಲಿಲ್ಲ. ಈ ಘಟನೆ ನಡೆದದ್ದು ಏಕೆ, ಹೇಗೆ, ಆರೋಪಿಗಳ ಉದ್ದೇಶವೇನಾದರೂ ಇತ್ತೆ ? ಎನ್ನುವುದು ಇದುವರೆಗೂ ಬಹಿರಂಗವಾಗಿಲ್ಲ. ಮುಖ್ಯ ಆರೋಪಿ ನ್ಯೂಜಿಲ್ಯಾಂಡ್‌ನ ಪ್ರಜೆ ಕಿಂಪೀಟರ್ ಡೇವಿಯನ್ನು ಕೊನೆಗೂ ಬಂಧಿಸಲು ಆಗಲೇ ಇಲ್ಲ. ನ್ಯಾಯಾಲಯದಿಂದ ಜೀವಾವಧಿ ಶಿಕ್ಷೆಗೊಳಗಾದ ಐವರು ಆರೋಪಿಗಳನ್ನು ಬಿಡುಗಡೆಗೊಳಿಸಲಾಯಿತು. ಇವರಿಗೆ ಕ್ಷಮಾದಾನ ಕೊಡಿಸುವ ಕೈವಾಡವು ರಷ್ಯಾದ್ದು. ಇನ್ನೊಬ್ಬ ಆರೋಪಿ ಪೀಟರ್ ಬ್ಲೀಚ್‌ಗೆ 8 ವರ್ಷದ ಸೆರೆವಾಸದ ನಂತರ ಅವನಿಗೂ ರಾಷ್ಟ್ರಪತಿಯವರ ಕ್ಷಮಾದಾನ ದೊರೆಯಿತು. ಇದಕ್ಕೆ ಇಂಗ್ಲೆಂಡ್‌ನ ಕೈವಾಡವಿತ್ತು. ಇದಾದನಂತರ ಅಹಮದಾಬಾದ್‌ನ ವಿಮಾನ ನಿಲ್ದಾಣದಲ್ಲಿ ಬಲ್ಗೇರಿಯಾದ ವಿಮಾನವೊಂದು ಸ್ವಲ್ಪಕಾಲ ನಿಂತಿತ್ತು. ಆ ವಿಮಾನದ ತುಂಬಾ ಆಧುನಿಕ ಶಸ್ತ್ರಾಸ್ತ್ರಗಳು ತುಂಬಿದ್ದವು. ಈಗ ಮತ್ತೊಂದು ಪುರುಲಿಯಾ ಪ್ರಕರಣವೇ ಇನ್ನೊಂದು ರೂಪದಲ್ಲಿ ಪುನರಾವರ್ತನೆಯಾಗುತ್ತಿವೆ ಎನ್ನುವ ವದಂತಿಗಳು ಹರಡಿದವು. ''ನೇಪಾಳವು ಅಮೆರಿಕಾದಿಂದ ಖರೀದಿಸಿದ, ಶಸ್ತ್ರಾಸ್ತ್ರಗಳನ್ನು ಹೊಂದಿದ ಆ ವಿಮಾನವು ಕಠ್ಮಂಡುವಿಗೆ ಹೋಗುತ್ತಿದೆ. ಪೆಟ್ರೋಲ್ ತುಂಬಿಸಿಕೊಳ್ಳುವುದಕ್ಕಾಗಿ ಅಹಮದಾಬಾದ್‌ನಲ್ಲಿ ಇಳಿದಿದೆ'' ಎಂದು ಅಧಿಕಾರಿಗಳು ಸಮಜಾಯಿಸಿ ನೀಡಿದ ನಂತರ ವದಂತಿಗಳು ತಣ್ಣಗಾದವು. ಇದಾದ ನಂತರದ ಎರಡು ದಿನಗಳಲ್ಲಿಯೇ ಉತ್ತರ ಪ್ರದೇಶದ ಘಾಜಿಯಾಬಾದ್‌ನಲ್ಲಿ ಭೂಷನ್ ಸ್ಟೀಲ್ ಕಂಪನಿಯಲ್ಲಿ ಬಾಂಬ್ ಸಿಡಿತದಿಂದ 10 ಜನ ಸತ್ತುಹೋದರು. ಬಾಯ್ಲರ್ ಸಿಡಿದಿದ್ದರಿಂದ ಹೀಗಾಗಿದೆ ಎಂದೇ ಮೊದಲು ಹೇಳಲಾಯಿತು. ಬಾಂಬ್ - ತಜ್ಞರು ಕಂಪನಿಗೆ ಭೇಟಿ ನೀಡಿದಾಗ ಅಲ್ಲಿ ರಾಕೆಟ್ ಶೆಲ್ಸ್, ಫ್ಯೂಸ್ ಇರುವ ರಾಕೆಟ್‌ಗಳು ಕಂಡುಬಂದವು. ಇರಾನ್‌ನಿಂದ ತರಿಸಿದ ಕಬ್ಬಿಣದ ಗುಜರಿ ವಸ್ತುಗಳನ್ನು ತಂದು Furnace ಗೆ ಹಾಕಿ ಆರ್ಡರ್ಸ್ ಪ್ರಕಾರ ಬೇರೇ ವಸ್ತುಗಳನ್ನು ಹಾಗೂ Sheets ಅನ್ನು ತನ್ನ ಗಿರಾಕಿಗಳಿಗಾಗಿ ಮಾಡಿಕೊಡುತ್ತಿತ್ತು. ಕಾರ್ಖಾನೆಯ ಅಧಿಕಾರಿಗಳು ಗುಜರಿ ವಸ್ತುಗಳಲ್ಲಿ ಅಕಸ್ಮಾತ್ ಆಗಿ ರಾಕೆಟ್ ಶೆಲ್ಸ್ ಪತ್ತೆಯಾಗಿವೆ ಎಂದು ಸಮಜಾಯಿಸಿ ನೀಡಿದ್ದರು. ಆದರೆ ತನಿಖೆ ತೀವ್ರಗೊಂಡಾಗ 8 ಲಾರಿಗಳಲ್ಲಿ ರಾಕೆಟ್‌ಗಳ ರಾಶಿಯೇ

ಕಂಡುಬಂತು. ದೆಹಲಿಯ ಹೊರವಲಯದಲ್ಲಿರುವ ಕಾರ್ಖಾನೆಯ ಒಳಗೆ 10 ಅಡಿ ಆಳದಲ್ಲಿ ರಾಕೆಟ್ ಲಾಂಚರ್ - ಸ್ಕಡ್ಸ್ ಪತ್ತೆಯಾದವು. ಸಮುದ್ರ ತೀರದ ಬಂದರು ಕಸ್ಟಮ್ಸ್ ಅಧಿಕಾರಿಗಳ ಕಣ್ಣು ತಪ್ಪಿಸಿ ಇವು ಹೇಗೆ ಬಂದವು ? ಎಂದು ಈಗ ಎಲ್ಲರನ್ನೂ ಕಾಡುತ್ತಿರುವ ಪ್ರಶ್ನೆ. ಬಂದರಿಗೆ ಬರುವ ಎಲ್ಲಾ ಹಡಗುಗಳನ್ನು ಪರಿಶೀಲನೆ ಮಾಡಿದ ನಂತರವೇ ಅದರಲ್ಲಿರುವ ಸರಕುಗಳನ್ನು ಕೆಳಗಿಳಿಸಲು ಅನುಮತಿ ನೀಡಲಾಗುತ್ತಿದೆ. ಕಸ್ಟಮ್ಸ್ ಅಧಿಕಾರಿಗಳು ಶಾಮೀಲಾಗದೆ ಇಷ್ಟೊಂದು ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಗುಜರಿ ಸರಕುಗಳೆಂದು ನಂಬಿಸಿ ಹೊರಗೆ ತರಲು ಸಾಧ್ಯವೇ ಇಲ್ಲ. ಭೂಷನ್ ಅಧಿಕಾರಿಗಳ ವಿರುದ್ಧ ಪ್ರಕರಣವನ್ನು ದಾಖಲಿಸಿ ಇಬ್ಬರು ಕಸ್ಟಮ್ಸ್ ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗಿದೆ. ದುಬೈನ ಲಕ್ಕಿ ಮೆಟಲ್ಸ್ SZE, ಮುಂಬೈನ ಮ್ಯಾಟ್ಕೋ ಕಂಪನಿಗಳು ಭೂಷಣ್ ಸ್ಟೀಲ್ ಕಂಪನಿಗೆ ಸ್ಟೀಲ್ ಸ್ಕ್ರ್ಯಾಪ್ಸ್ ಅನ್ನು ಪೂರೈಸುವ ಗುತ್ತಿಗೆ ವಹಿಸಿಕೊಂಡಿದ್ದವು. ಈ ವರ್ಷದ ಏಪ್ರಿಲ್‌ನಿಂದ ಸಾವಿರಾರು ಕಂಟೈನರ್ಸ್ ಬಂದಿವೆ. ಹೆಚ್ಚಿನವು ಇರಾನ್‌ನಿಂದ ದುಬೈ ಮಾರ್ಗವಾಗಿ ಬಂದಿವೆ. ಈಗ ತನಿಖಾಧಿಕಾರಿಗಳಿಗೆ ಸಂಶಯ ಬಂದಿದೆ. 1993ರಲ್ಲಿ ನೂರಾರು ಜನರನ್ನು ಬಲಿ ತೆಗೆದುಕೊಂಡ ಮುಂಬೈನ ಸರಣಿ ಬಾಂಬ್ ಸಿಡಿತಗಳ ಪ್ರಕರಣದಲ್ಲಿ ಬಳಸಿದ RDX ಕಛ್ ಮೂಲಕ ಬಂದಿತ್ತು. ಉಗ್ರಗಾಮಿಗಳ ದಮನಕ್ಕಾಗಿ ಇದ್ದ ಪೋಟಾ ಕಾಯ್ದೆ ರದ್ದಾಗಿದೆ. ಹೊಸ ಕಾಯಿದೆಯಲ್ಲಿ ಉಗ್ರಗಾಮಿಗಳು ಜಾಮೀನು ಪಡೆಯಲು ಸಾಕಷ್ಟು ಅನುಕೂಲವಾಗಿದೆ.

- ಬಿ. ಎಸ್. ಸತೀಶ್

## ಶ್ರದ್ಧಾಂಜಲಿ

12.11.04 ಬೆಂಗಳೂರು

**ಶ್ರೀಮತಿ ವಸುಂಧರಾ, 57 ವರ್ಷ, ಆತ್ರೇಯಸ ಗೋತ್ರ** (ಬೆಂಗಳೂರು ಸಂಕೇತಿ ಮಹಿಳಾ ಸಮಾಜದ ಖಜಾಂಚಿ) ಶ್ರೀ ಎಸ್. ಎನ್. ವಿಜಯಕುಮಾರ್ ಅವರ ಧರ್ಮಪತ್ನಿ ಹಾಗೂ ದಿ|| ಶ್ರೀ ಎಸ್. ಕೆ. ನಾರಾಯಣರಾಯರ ಸೊಸೆ.

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.





# ಬೆಟ್ಟದಪುರ ಸಂಕೇತಿ ಸಂಘ

## ಮೈಸೂರು ಶಾಖೆ (ಕೆ.ಆರ್.ವನಂ), ಮೈಸೂರು

ಸಂಕೇತಿಗಳು ಯಾವ ಕ್ಷೇತ್ರದಲ್ಲಿದ್ದರೂ ಆಯಾಯ ಕ್ಷೇತ್ರಕ್ಕೆ ತಕ್ಕಂತಹ ಕಾರ್ಯಗೌರವಕ್ಕೆ ಪಾತ್ರರಾಗುತ್ತಾರೆ.



ಕೊಡಗು ಜಿಲ್ಲೆ, ರಾಮಸ್ವಾಮಿ ಕಣಿವೆಯ, ಲೇಟ್ ಶ್ರೀ ಲಕ್ಷ್ಮೀಕಾಂತಯ್ಯ ಮತ್ತು ಶ್ರೀಮತಿ. ಸಾವಿತ್ರಮ್ಮ ಇವರ ಪುತ್ರರಾದ ಶ್ರೀ ಆರ್.ಎಲ್. ಶ್ರೀನಿವಾಸ್ ರವರಿಗೆ 2004ನೇ ಸಾಲಿನ ನಾಗರೀಕ ಸೇವಾ ಪ್ರಶಸ್ತಿ ದೊರೆತಿದೆ ಎಂಬ ವಿಷಯ ತಿಳಿಸಲು ಸಂತೋಷವಾಗುತ್ತದೆ.

ಶ್ರೀನಿವಾಸರವರು ವಿಜ್ಞಾನ ಮತ್ತು ಕಾನೂನು ಪದವೀಧರರು, ಮೈಸೂರಿನಲ್ಲಿ ಕಾಲೇಜ್ ವಿದ್ಯಾಭ್ಯಾಸ ಮಾಡಿದರು. ಕಂದಾಯ ಇಲಾಖೆಯಲ್ಲಿ ಕೆಲಸಕ್ಕೆ ಸೇರಿ ವಿವಿಧ ಹಂತಗಳಲ್ಲಿ ಕೆಲಸಮಾಡಿ ಬಡ್ತಿಪಡೆದು ಈಗ ಕೃಷ್ಣರಾಜ ನಗರದಲ್ಲಿ ತಹಶೀಲ್‌ದಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜವಾಬ್ದಾರಿ ಕೆಲಸಗಳನ್ನು ನಿಭಾಯಿಸುವುದರಲ್ಲಿ ಯಶಸ್ವಿಯಾದ ಶ್ರೀ. ಶ್ರೀನಿವಾಸ್‌ರವರು ಸಂಕೇತಿಗಳು ಎಂಬ ವಿಷಯ ನಮ್ಮ ಜನಾಂಗಕ್ಕೆ ಅತ್ಯಂತ ಅಭಿಮಾನದ ಸಂಗತಿ.

ರಾಜ್ಯ ಕಂದಾಯ ಇಲಾಖೆ ನೌಕರರ ಸಂಘದ ಅಧ್ಯಕ್ಷರಾಗಿ, ಮೈಸೂರು ಜಿಲ್ಲಾ ಕಂದಾಯ ಇಲಾಖೆ ನೌಕರರ ಸಂಘದ ಖಜಾಂಚಿಯಾಗಿ ಎರಡು ಬಾರಿ ಜಿಲ್ಲಾ ಸರ್ಕಾರಿ ನೌಕರರ ಸಂಘದ ಸಂಘಟನಾ ಕಾರ್ಯದರ್ಶಿಯಾಗಿ ಪ್ರಸ್ತುತ ಮೈಸೂರು ಜಿಲ್ಲಾ ಪಂಚಾಯತಿ ಗೃಹ ನಿರ್ಮಾಣ ಸಹಕಾರ ಸಂಘದ ಉಪಾಧ್ಯಕ್ಷರಾಗಿದ್ದಾರೆ. ಕೆ.ಆರ್.ನಗರದಲ್ಲಿ ಸಹಕಾರಿ ಅದಾಲತ್, ಶೈಕ್ಷಣಿಕ ಸುಧಾರಣಾ ಸಮಾವೇಶವನ್ನು ಇಲಾಖೆ ಅಧಿಕಾರಿಗಳ ಸಹಕಾರದೊಂದಿಗೆ ದಕ್ಷತೆಯಿಂದ ನಿರ್ವಹಿಸಿದ್ದಾರೆ. ಸಾಲಿಗ್ರಾಮದ ಶ್ರೀ. ಯೋಗನರಸಿಂಹ ಸ್ವಾಮಿ ದೇವಸ್ಥಾನವನ್ನು ಸ್ಥಳೀಯ ಗ್ರಾಮಸ್ಥರ ಸಹಕಾರದೊಂದಿಗೆ ಜೀರ್ಣೋದ್ಧಾರ ಕಾರ್ಯ ಮಾಡಿದ್ದಾರೆ, ಕಂದಾಯ ಇಲಾಖೆಯಲ್ಲಿ ಒಳ್ಳೆಯ ಹೆಸರು ಗಳಿಸಿದ್ದಾರೆ. ಯಾವುದೇ ಆಸೆ ಆಕಾಂಕ್ಷೆಗಳಿಲ್ಲದೆ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಬೆರೆತು ಜನರ ಮನಸ್ಸನ್ನು ಗೆದ್ದಿದ್ದಾರೆ.

ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದವತಿಯಿಂದ ಸನ್ಮಾನಿತರಾಗಿದ್ದಾರೆ. ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನವೆಂಬರ್

1-11-2004ರಂದು ಮೈಸೂರಿನ ಪುರಭವನದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಾನ್ಯ ಉಪಮುಖ್ಯಮಂತ್ರಿ ಶ್ರೀ. ಸಿದ್ಧರಾಮಯ್ಯನವರಿಂದ, ಶ್ರೀ ಆರ್.ಎಲ್.ಶ್ರೀನಿವಾಸ್‌ರವರಿಗೆ ನಾಗರೀಕ ಸೇವಾ ಪ್ರಶಸ್ತಿಪ್ರಧಾನ ಮಾಡಲಾಯಿತು. ಇವರ ಸೇವೆ ನಿರಂತರವಾಗಿ ದೊರಕುತ್ತಿರಲಿ ಸಂಕೇತಿಗಳ ಖ್ಯಾತಿ ಹರಡಲಿ ಎಂದು ಹಾರೈಸುತ್ತೇವೆ.

**ಹೆಚ್.ಎಸ್. ಶ್ರೀಧರಮೂರ್ತಿ**
ಮೈಸೂರು

## ಮೈಸೂರಿನ ಸಮುದಾಯ ಭವನದಲ್ಲಿ ಅಶ್ವತ್ಥಕಟ್ಟೆ ಉದ್ಘಾಟನೆ

ದಾನಿಗಳ ಉದಾರ ಕೊಡುಗೆಯಿಂದ ಶ್ರೀ ತಾರಣ ಸಂವತ್ಸರದ ನಿಜ ಶ್ರಾವಣ ಶುಕ್ಲಪ್ರತಿಪತ್‌ನಲ್ಲಿ ಅಶ್ವತ್ಥಕಟ್ಟೆ ಸ್ಥಾಪಿಸಲಾಯಿತು. ಬೆಟ್ಟದಪುರ ಸಂಕೇತಿ ಸಂಘದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಎಂ. ನರಸಿಂಹನ್‌ರವರಿಂದ ಸೆಪ್ಟೆಂಬರ್ 2004ರಲ್ಲಿ ವಿದ್ಯುಕ್ತವಾಗಿ ಉದ್ಘಾಟಿಸಲಾಯಿತು.

## ಮೈಸೂರು ವಿದ್ಯಾರ್ಥಿ ನಿಲಯದಲ್ಲಿ ನವರಾತ್ರಿಯ ಅಂಗವಾಗಿ ಆಯುಧಪೂಜಾ ಮಹೋತ್ಸವ

ಎಂದಿನಂತೆ ಶರನ್ನವರಾತ್ರಿಯ ಆಶ್ವಯುಜ ಶುಕ್ಲ ನವಮಿಯಂದು (22.10.04) ಆಯುಧಪೂಜೆ ನೆರವೇರಿಸಲಾಯಿತು. ನಂತರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಮತ್ತು ಇತರೆ ಸಿಬ್ಬಂದಿ ವರ್ಗಕ್ಕೂ ಸೇರಿದಂತೆ ಸಿಹಿ ಹಂಚಿ ಸಮಾರಂಭ ಮುಕ್ತಾಯ ಗೊಳಿಸಲಾಯಿತು.

ವರದಿ
**ಡಾ॥ ಸುರೇಶ**
ಜಂಟಿ ಕಾರ್ಯದರ್ಶಿ





## ಮೈಸೂರು ವಿದ್ಯಾರ್ಥಿ ನಿಲಯದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ

ನವೆಂಬರ್ 1ರಂದು ರಾಜ್ಯೋತ್ಸವದ ಅಂಗವಾಗಿ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಬೆಳಿಗ್ಗೆ 9.30 ಗಂಟೆಗೆ ಕಾರ್ಯಕ್ರಮ ಆರಂಭವಾಯಿತು. ಪ್ರಪ್ರಥಮವಾಗಿ ಶ್ರೀ ಹುಯಿಲ್‌ಗೋಳ ನಾರಾಯಣರಾಯರ ''ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'' ಎಂಬ ಗೀತೆಯ ಪ್ರಾರ್ಥನೆಯನ್ನು ಸಲ್ಲಿಸಲಾಯಿತು. ನಂತರ ಕೇಂದ್ರ ಸಮಿತಿಯ ಉಪಾಧ್ಯಕ್ಷರಾದ ಶ್ರೀಮತಿ ವಸಂತ ಲಕ್ಷ್ಮಿಯವರಿಂದ ಧ್ವಜಾರೋಹಣವನ್ನು ನೆರವೇರಿಸಲಾಯಿತು. ರಾಷ್ಟ್ರಕವಿ ಕುವೆಂಪುರವರ ''ಜಯ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ'' ಎಂಬ ಗೀತೆಯನ್ನು ಹಾಡುವ ಮೂಲಕ ಧ್ವಜ ವಂದನೆ ನೀಡಲಾಯಿತು. ವಿದ್ಯಾರ್ಥಿಗಳು ಮತ್ತು ಇತರೆ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಕೇಂದ್ರ ಸಮಿತಿಯ ಜಂಟಿ ಕಾರ್ಯದರ್ಶಿಯಾದ ಡಾ॥ ಸುರೇಶ ಮತ್ತು ವ್ಯವಸ್ಥಾಪಕರಾದ ಶ್ರೀಮಾನ್ ಆರ್. ಜಿ. ಕೇಶವಮೂರ್ತಿಯವರು ಉಪಸ್ಥಿತರಿದ್ದರು. ಸಿಹಿ ವಿತರಣೆಯನಂತರ ಸಮಾರಂಭ ಮುಕ್ತಾಯವಾಯಿತು. ಇದೇ ಸಂದರ್ಭದಲ್ಲಿ ರಾಷ್ಟ್ರ ನೇತಾರ ''ಸುಭಾಷ್ ಚಂದ್ರಬೋಸ್''ರವರ ದಿವ್ಯ ಸ್ಮರಣೆಯ ಕುರುಹಾಗಿ ''I.N.A. Day'' ಆಚರಿಸಲು ನಿರ್ಣಯ ಕೈಗೊಳ್ಳಲಾಯಿತು.

ವರದಿ
**ಡಾ॥ ಸುರೇಶ**
ಜಂಟಿ ಕಾರ್ಯದರ್ಶಿ

### ವಧು ಬೇಕಾಗಿದೆ

### ವರನ ವಿವರ

| | | |
|---|---|---|
| ಗೋತ್ರ | : | ಕೌಶಿಕ |
| ನಕ್ಷತ್ರ | : | ಪುಬ್ಬ |
| ವಯಸ್ಸು | : | 31 ವರ್ಷ |
| ಎತ್ತರ | : | 5'7'' |
| ವಿದ್ಯಾರ್ಹತೆ | : | B.Sc. CMT |
| ಉದ್ಯೋಗ | : | Medical Transcriptor |
| ನಿರೀಕ್ಷೆ | : | ಒಳ್ಳೆಯ ಮನೆತನದ ಸುಂದರ ಕನ್ಯೆ |
| ಸಂಪರ್ಕಿಸಿ | : | 26677065 |

# POINT TO PONDER

Of late my friend Gopal has become quite a philosopher and a keen observer. He notes small happenings and gives them wonderful interpretations. A similar incidence happened the other day. We were having work in the lovely Lalbaugh. Suddenly Gopal said, "Doctor, just go and find out what that little child is doing?" I saw a little girl of about five years admiring something in her palm which she had picked up. I approached her and said in a gentle voice, "Please show me what you have in your palm, darling?" With sparkling eyes she said in a whisper, "Grandpa, I have found out a wonderful stone!" She opened her palms and showed me a small pebble with multiple colours. By now Gopal had joined me and we examined the stone with equal enthusiasm with Gopal polishing it with the edge of his dhothi returned it to the child and saying, "Please take good care of it !" we left the child with her precious discovery. Casually I remarked, "What was the need to kindle that child's curiosity? Afterall children pick all sorts of worthless things and keep. Afterall we too had stored such trash in our child hood and thrown them out after we matured!"Gopal hastily said, "Ah, that is where we lost our real happiness, how we enjoyed the various cloud patterns, how we relished the taste of the stem of grass, how we felt exhirated on





seeing the touch me not plant, how we wondered at the multicoloured birds and their chirpings, how struck we were on seeing a centipede etc. all these were so soothing. But as we grew older we lost all these and started joining in the mad rush for money position etc with the net result that we developed all sorts of ailments and died miserably. Come on, doctor, let us rewind our life and become children!" We chose a nice grassy place, sat down on the dew covered grass not caring for the wetness, started picking up pebbles with various colours, felt the soft touch of the newly formed grass leaves, observed the various patterns of the clouds, listened to the songs of the birds, enjoyed the fragrance of the various flowers in short we relived the childhood days sharing the joys Even before we realised we had happily spent two full hours in these activities and we never realised it. We were brought to reality when the gardener asked us to vacate the place as they were planning to have a small rose garden in that area. We got up and moved for about a hundred yards as though in a trance. "Oh, Gopal it was such a grand refreshing experience. If only every one does it every day there will not be any work for doctors !"

Let us ponder on this point.

**- Dr. S. Mohan Ram**

***********

# ಪ್ರತಿಕ್ರಿಯೆ

## ಜ್ಯೋತಿರ್ಲಿಂಗದ ಬಗ್ಗೆ ಸಮಜಾಯಿಶಿಕೆ

ಜುಲೈ ತಿಂಗಳ ಸಂಚಿಕೆಯಲ್ಲಿ ಜ್ಯೋತಿರ್ಲಿಂಗಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಗೋಕರ್ಣದಲ್ಲಿರುವುದು ಜ್ಯೋತಿರ್ಲಿಂಗವಲ್ಲ, ಶಿವನ ಆತ್ಮಲಿಂಗವೆಂದು ಶ್ರೀ ಹೆಚ್. ಎಸ್. ಪುರುಷೋತ್ತಮ್‌ರವರು ಶ್ಲೋಕದ ಮೂಲಕ ಪುಷ್ಟೀಕರಿಸಿದ್ದಾರೆ. ಈ ಬಗ್ಗೆ ನಾನು ಕೆಲವು ಸಮಜಾಶಿಕೆಯನ್ನು ಕೊಡಲು ಇಚ್ಛಿಸುತ್ತೇನೆ. ಶ್ರೀ ವಿ. ಎಸ್. ರಾಮಕೃಷ್ಣ ಎಂಬುವವರು ನಿವೃತ್ತ ಪ್ರಾಂಶುಪಾಲರು. ಇವರಿಗೆ 82 ವರ್ಷ ವಯಸ್ಸಾಗಿದೆ. ಇವರು ಆನೇಕ ಗ್ರಂಥಗಳನ್ನು ಬರೆದಿದ್ದಾರೆ. ಅವರು ಬರೆದ ಮುಖ್ಯವಾದ ಕೆಲವು ಕೃತಿಗಳನ್ನು ಹೆಸರಿಸುತ್ತೇನೆ. 1. ದಿವ್ಯಜ್ಯೋತಿ (ಮಹಾಪುರುಷರ ಜೀವನ ಚರಿತ್ರೆಗಳು) 2. ಲಕ್ಷ್ಮೀಶನ ಮಹಾಕಾವ್ಯ (ಜೈಮಿನಿ ಭಾರತ ಕಥಾಸಾರ) 3. ರಾಘವೇಂದ್ರ ವಿಜಯ (ವಾರ್ದಕ ಷಟ್ಪದಿ) 4. ಶ್ರೀ ಕಾವೇರಿ ವಿಜಯ (ವಾರ್ಧಕ ಷಟ್ಪದಿ ಕಾವ್ಯ) 5. ಶ್ರೀ ರಾಮಚರಿತಾಂಮೃತಂ. ಹೀಗೆ 22 ಕೃತಿಗಳನ್ನು ರಚಿಸಿದ್ದಾರೆ.

ದಿನಾಂಕ 26.02.2003ರ ಕೊಡಗು ಸಮಾಚಾರ ಎಂಬ ಪತ್ರಿಕೆಯಲ್ಲಿ ಇವರು ''ಮಹಾ ಶಿವರಾತ್ರಿ ಮತ್ತು ದ್ವಾದಶ ಜ್ಯೋತಿರ್ಲಿಂಗಗಳ ಉಪಾಸನೆ'' ಎಂಬ ಲೇಖನವನ್ನು ಬರೆದು ಅದರಲ್ಲಿ 12 ಜ್ಯೋತಿರ್ಲಿಂಗಗಳ ಹೆಸರನ್ನು ಬರೆದಿರುತ್ತಾರೆ. ಕಾಶಿಯ ಜ್ಯೋತಿರ್ಲಿಂಗದ ಬಗ್ಗೆ ನನ್ನ ಲೇಖನದಲ್ಲಿ ಪ್ರಸ್ತಾಪ ಮಾಡುವಾಗ ಇವರ ಲೋಖನವನ್ನು ಆಧರಿಸಿ ಜುಲೈ ತಿಂಗಳ ಸಂಚಿಕೆಯಲ್ಲಿ ಬರೆದಿದ್ದನು. ಆಗಸ್ಟ್ ತಿಂಗಳ ಸಂಚಿಕೆ ನನ್ನ ಕೈ ಸೇರಿದ ನಂತರ ಶ್ರೀ ಪುರುಷೋತ್ತಮರವರು ಒಂದು ಜ್ಯೋತಿರ್ಲಿಂಗದ ಬಗ್ಗೆ ತಿದ್ದುಪಡಿ ಮಾಡಿಕೊಳ್ಳಬೇಕೆಂದು ಸಲಹೆಯನ್ನು ಕೊಟ್ಟರು. ತಕ್ಷಣ ಶ್ರೀ ರಾಮಕೃಷ್ಣರವರ ಮನೆಗೆ ಹೋಗಿ ಎಲ್ಲವನ್ನು ವಿವರಿಸಿದೆ. ಆಗ ಅವರು ''ಧರ್ಮಪ್ರಭ'' ಎಂಬ ಮಾಸಿಕ ಪತ್ರಿಕೆ ಬೆಂಗಳೂರಿನಿಂದ ಪ್ರಕಟವಾಗುತ್ತದೆ. 2001ರ ಇಸವಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನವನ್ನು ಆಧರಿಸಿ ತನ್ನ ಲೇಖನದಲ್ಲಿ ಅಳವಡಿಸಿಕೊಂಡಿರುವುದಾಗಿ ತಿಳಿಸಿದರು. ಆ ಪತ್ರಿಕೆಯನ್ನು ತಾನು ಇಟ್ಟಿದ್ದೇನೆಂದು ಅದನ್ನು ಕೊಡುವುದಾಗಿ ತಿಳಿಸಿದರು. ಒಂದು ವಾರದ ನಂತರ ನನ್ನನ್ನು ಕರೆಸಿಕೊಂಡು ಧರ್ಮಪ್ರಭ ಮಾರ್ಚಿ





2002ರ ಸಂಚಿಕೆಯಲ್ಲಿ ಜ್ಯೋತಿರ್ಲಿಂಗದ ಬಗ್ಗೆ ವಿವರವಾದ ವಿಷಯ ಪ್ರಕಟವಾಗಿರುವುದನ್ನು ತೋರಿಸಿ, ಶ್ರೀ ಪುರುಷೋತ್ತಮ್‌ರವರು ಬರೆದದ್ದು ಸರಿಯಾಗಿದೆ ಎಂದು ತಿಳಿಸಿದರು. ಅಲ್ಲದೆ ಧಾರವಾಡದಿಂದ ಪ್ರಕಟವಾಗಿರುವ ಸಮಾಜ ಪುಸ್ತಕಾಲಯದ ಪುಸ್ತಕದಲ್ಲಿ ಜ್ಯೋತಿರ್ಲಿಂಗದ ಬಗ್ಗೆ ಪ್ರಕಟವಾಗಿರುವುದನ್ನು ತೋರಿಸಿದರು. ಶ್ರೀ ಶಿವಮಹಾಪುರಾಣದಲ್ಲಿ ಪುಟ 424ರಲ್ಲಿ ಚತುರ್ಥ ಕೋಟಿ ರುದ್ರ ಸಂಹಿತೆಯಲ್ಲಿ ಜ್ಯೋತಿರ್ಲಿಂಗಗಳ ಬಗ್ಗೆ ಪ್ರಸ್ತಾಪವಾಗಿರುವುದನ್ನು ತೋರಿಸಿದರು. ಇದರಲ್ಲೂ ಕೂಡ ಗೋಕರ್ಣದ ಬಗ್ಗೆ ಹೇಳಿಲ್ಲ. ಆದರೆ ಪುಟ 437ರಲ್ಲಿ ಗೋಕರ್ಣ ಕ್ಷೇತ್ರದಲ್ಲಿ ಒಂದು ಪವಿತ್ರವಾದ ವನದಲ್ಲಿ ''ಚಂದ್ರಬಾಲ'' ಎಂಬ ಶ್ರೇಷ್ಠ ಜ್ಯೋತಿರ್ಲಿಂಗವಿದೆ ಎಂದು ಹೇಳಿ, ಈ ಲಿಂಗವು ರಾವಣನಿಂದ ಸ್ಥಾಪಿತವಾಗಿದೆ ಎಂದು, ಆ ಲಿಂಗದಲ್ಲಿ ಶಂಕರನು ಸದಾ ಕಾಲವು ವಾಸವಾಗಿರುತ್ತಾನೆಂದು ತಿಳಿಸಿರುವುದನ್ನು ತೋರಿಸಿದರು. ಬಹುಶಃ 2001ರ ''ಧರ್ಮಪ್ರಭ'' ಎಂಬ ಪತ್ರಿಕೆಯಲ್ಲಿ ಈ ಬಗ್ಗೆ ಪ್ರಸ್ತಾವನೆಯನ್ನು ಮಾಡಿರಬಹುದು. ನಿಮಗೆಲ್ಲಾ ಶ್ರೀ ರಾಮಕೃಷ್ಣರ ಪರಿಚಯವನ್ನು ಮಾಡಿಸುತ್ತೇನೆ. ನಿಮಗೆ ಪರಿಚಯವಿಲ್ಲದಿದ್ದರೂ ಕೂಡಲೇ ಅವರು ಯಾರೆಂದು ತಿಳಿಯುತ್ತದೆ. ನಿಮಗೆಲ್ಲಾ ಸಿನಿಮಾ ತಾರೆ ವಿನಯಾಪ್ರಸಾದ್ ಗೊತ್ತಿದೆ. ಪತಿ ಪ್ರಸಾದ್‌ರವರ ತಂದೆಯೇ ಶ್ರೀ ರಾಮಕೃಷ್ಣರವರು. ಈಗ ವಿನಯಾ 2ನೇ ಮದುವೆಯಾಗಿ ವಿನಯಾಪ್ರಕಾಶ್ ಆಗಿದ್ದಾರೆ. ಈ ಬಗ್ಗೆ ಧರ್ಮಪ್ರಭದಲ್ಲಿ ಪ್ರಕಟವಾದ ಪ್ರತಿ, ಧಾರವಾಡದಿಂದ ಪ್ರಕಟವಾದ ಪುಸ್ತಕದ ಪ್ರತಿ, ಶಿವಪುರಾಣದ 2 ಪ್ರತಿಗಳು ಮತ್ತು 26.06.2003ರಲ್ಲಿ ಪ್ರಕಟವಾದ ಕೊಡಗು. ಸಮಾಚಾರ ಪತ್ರಿಕೆಯ ಪ್ರತಿ ಇವೆಲ್ಲವನ್ನು ಅಧ್ಯಕ್ಷರಿಗೆ ಕಳುಹಿಸಿದ್ದೇನೆ. ದಾಖಲೆಗಳನ್ನು ನೋಡುವಾಗ ನನ್ನ ಲೇಖನದಲ್ಲಿರುವ ಗೋಕರ್ಣ ಕ್ಷೇತ್ರದ ಜ್ಯೋತಿರ್ಲಿಂಗವನ್ನು ತೆಗೆದು ಪರಳಿಯ ವೈದ್ಯನಾಥ ಜ್ಯೋತಿರ್ಲಿಂಗ ಎಂದು ಸೇರಿಸಿಕೊಳ್ಳುವುದು ಸರಿಯೆಂದು ಕಾಣಿಸುತ್ತದೆ. ತಿದ್ದಿಕೊಳ್ಳಲು ಸಹಕರಿಸಿದ ಹೆಚ್.ಎನ್. ಪರುಷೋತ್ತಮ್‌ರವರಿಗೆ ಆಭಾರಿಯಾಗಿದ್ದೇನೆ.

**ಆರ್. ಎಸ್. ಕಾಶೀಪತಿ**
ಕುಶಾಲನಗರ

## ಬೆಂಗಳೂರು ಸಂಕೇತಿ ಮಹಿಳಾ ಸಮಾಜ

ಡಿಸೆಂಬರ್ 4ರಂದು ಮಕ್ಕಳ ದಿನಾಚರಣೆಯ ಅಂಗವಾಗಿ, ದಿ|| ರಾಮ್‌ಶಿವಶಂಕರರ ಸ್ಮರಣಾರ್ಥ ಸದಸ್ಯೆಯರ ಮಕ್ಕಳು/ಮೊಮ್ಮಕ್ಕಳಿಗೆ (12 ವರ್ಷದ ಒಳಗಿನ) ಆಟಗಳು, ಬಹುಮಾನ ವಿನಿಯೋಗ ಕಾರ್ಯಕ್ರಮವನ್ನು ಎನ್‌ಎಸ್‌ವಿಕೆ ಬಯಲು ರಂಗಮಂದಿರದಲ್ಲಿ ಏರ್ಪಡಿಸಲಾಗಿತ್ತು. ಎಲ್ಲಕ್ಕಿಂತ ಮೊದಲು, ನಮ್ಮೆಲ್ಲರ ನಲ್ಮೆಯ, ನೆಚ್ಚಿನ, ಆತ್ಮೀಯ ಖಜಾಂಚಿಯಾಗಿದ್ದ ಶ್ರೀಮತಿ ವಸುಂಧರಳು ದೈವಾಧೀನಳಾದ ಸುದ್ದಿಯನ್ನು ತಿಳಿಸಿ, ಒಡಲಾಳದ ನೋವನ್ನು ಸದಸ್ಯೆಯರೊಡನೆ ಹಂಚಿಕೊಳ್ಳಲಾಯಿತು. ಅವಳ ಆತ್ಮಕ್ಕೆ ಶಾಂತಿ ಸಿಗಲೆಂದು ಕೋರಿ, ಒಂದು ನಿಮಿಷದ ಮೌನದ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು. ಮಕ್ಕಳಿಗೆ ಆಟಗಳನ್ನು ಆಡಿಸಲು ಮೂರು ವಯೋಧರ್ಮದಲ್ಲಿ ಗುಂಪು ಮಾಡಲಾಯಿತು. 6-8, 8-10 ಮತ್ತು 10ರಿಂದ 12 ವರ್ಷಗಳು. ಸ್ಪೋರ್ಟ್ಸ್ ಕಮಿಟಿಯಲ್ಲಿರುವ ಸರಸ್ವತಿ. ವಿ., ಸಾವಿತ್ರಿ. ಆರ್., ಸುಕನ್ಯ. ವಿ. ಇವರುಗಳು ಆಟಗಳನ್ನು ಆಯೋಜಿಸಿದ್ದರು. ಮಕ್ಕಳು ಹೊಸರೀತಿಯ ಆಟಗಳನ್ನು ಖುಷಿಯಾಗಿ ಆಡಿ ಸಂತಸಪಟ್ಟರು. ಆಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ನೀಡಿದರು. ಆಟಗಳಲ್ಲಿ ಭಾಗವಹಿಸಿ, ಬಹುಮಾನ ಪಡೆಯದ ಮಕ್ಕಳಿಗೂ ನೆನಪಿನ ಕಾಣಿಕೆಗಳನ್ನು ನೀಡಲಾಯಿತು. ಆಟವಾಡಿ ಸುಸ್ತಾಗಿದ್ದ ಮಕ್ಕಳಿಗೆ ಮತ್ತು ಬಂದಿದ್ದ ಎಲ್ಲರಿಗೂ ಸೊಗಸಾದ, ರುಚಿಯಾದ ತಿಂಡಿ-ಕಾಫಿಯನ್ನು ನೀಡಿದ ಆತಿಥೇಯರುಗಳು ಶ್ರೀಮತಿಯರಾದ ಕಾತ್ಯಾಯಿನಿಬಾಯಿ, ಚಂಪಾ. ವಿ, ಪ್ರಮೀಳಾ. ಪಿ, ಗಾಯತ್ರಿ, ಲಕ್ಷ್ಮೀಬಾಯಿ, ಲೀಲ ಹೆಚ್.ಎಸ್., ಸರಸ್ವತಿ.ಎ., ಶೈಲಜ.ವಿ. ಮತ್ತು ರತ್ನ ಸುಧೀರ್ ಅವರುಗಳು.





## ಮಕ್ಕಳ ದಿನಾಚರಣೆಗಾಗಿ ಕೊಡುಗೆಗಳು (ಅಂದೇ ನೀಡಿದ್ದು)

| | | |
|---|---|---|
| 1. | ಶ್ರೀ ವಿಜಯ್ ಕುಮಾರ್ (ವಸುಂಧರಳ ನೆನಪಿನಲ್ಲಿ) | 500.00 |
| 2. | ಶ್ರೀಮತಿ ಸತ್ಯವತಿ. ಆರ್. (ತಾಯಿ ಕಮಲಾಬಾಯಿ ಹೆಸರಿನಲ್ಲಿ) | 120.00 |
| 3. | ಶ್ರೀ ಶಿವಶಂಕರ್ (ಮಗನ ಹೆಸರಿನಲ್ಲಿ) | ದತ್ತಿ |
| 4. | ಶ್ರೀಮತಿ ಲಕ್ಷ್ಮೀಬಾಯಿ | 120.00 |
| 5. | ಶ್ರೀಮತಿ ಸೀತ. ಎಂ.ಆರ್. | 120.00 |

## ಬಹುಮಾನಿತರು - 6ರಿಂದ 8 ವರ್ಷದ ಮಕ್ಕಳು

| | I Number Puzzle | II Clapping Game |
|---|---|---|
| I Prize | ನಿರಂಜನ್ | ನಿರಂಜನ್ |
| II Prize | ಕ್ಷೀರಜಾ | ಕ್ಷೀರಜಾ |
| III Prize | ಅಕ್ಷಯ್. ಎ. | ಅಕ್ಷಯ್. ಎ. |

## 8ರಿಂದ 10 ವರ್ಷದ ಮಕ್ಕಳು

| | I Ink Filler Game | Game of Dates |
|---|---|---|
| I Prize | ಐಶ್ವರ್ಯ | ವಿವೇಕ್ ಚಂದ್ರಕಾಂತ್ |
| II Prize | ವರ್ಣಶ್ರೀ | ಆದಿತ್ಯ |
| III Prize | ಅನುಪಮಾ | ಚರಣ್ |

## 10ರಿಂದ 12 ವರ್ಷದ ಮಕ್ಕಳು

### Group Game

ವಿವೇಕ್ ಚಂದ್ರಕಾಂತ್
ಅನುಪಮಾ
ವಿನಾಯಕ್
ಶ್ರೇಯಸ್
ಅವಿನಾಶ್

**ವಿಜೇತರಿಗೆ ಅಭಿನಂದನೆಗಳು**

ರು. ಕೃ. ಗೀತಾಮಣಿ
ಗೌ|| ಕಾರ್ಯದರ್ಶಿ
ದೂ. : 26695657

---

**ವರ ಬೇಕಾಗಿದೆ**

**ವಧುವಿನ ವಿವರ**

| | | |
|---|---|---|
| ಗೋತ್ರ | : | ವಾಧೂಲಸ |
| ವಯಸ್ಸು | : | 26 ವರ್ಷ |
| ನಕ್ಷತ್ರ | : | ಪುಷ್ಯ |
| ವಿದ್ಯಾರ್ಹತೆ | : | B.E. (Textiles) |
| ಉದ್ಯೋಗ | : | Sr. Executive - Pentaloons, Mumbai |
| ಸಂಪರ್ಕಿಸಿ | : | 080 - 23506584 |
| | | 0821 2568645, 2568144 } (pp) (Before 9 a.m. or After 7 p.m.) |
| | | 022 25286663 |





## A Shakespearian Letter

Dear "Hamlet",

I hope the weather is “As you like it”. Do you remember, on the “Twelfth Night”, we went to visit the “Merry Wives of Windsor” and were caught in “The Tempest”? Among the visitors was “King Henry V” who told us how “The Merchant of Venice” helped him with the “Taming of the Shrew”. Didn’t he also narrate “A Winter’s Tale”? “Romeo and Juliet” have found that "Love's labour lost". It was all "A Midsummer Night's Dream". There was "A Comedy of Errors" when "King Henry VIII" took away the old cloak of "King Lear" by mistake. It was all "Much Ado About Nothing". Convey my regards to "Julius Caeser". Looking forward for your reply. As the saying goes "A Measure for Measure".

Yours sincerely,
"Macbeth"
T. Subhav Kumar Jain

**ವಿಳಾಸ ಬದಲಾವಣೆ**

**ಜಯಲಕ್ಷ್ಮೀ ಮಾರ್ಕಂಡ ರಾವ್**
C/o. R. S. Ramanarayana,
No. 309, 9th Main, 17th Cross, Milk Colony,
Malleswaram, Bangalore - 560 003
Ph : 57652325

# ಪ್ರತಿಭಾ ಪುರಸ್ಕಾರ

2003-2004 ಸಾಲಿನ ಪಬ್ಲಿಕ್ ಪರೀಕ್ಷೆಗಳಾದ SSLC (CBSE & ICSE), PUC, Degree ಹಾಗೂ P.hd.ಗಳಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿರುವ ಮತ್ತು ರಾಜ್ಯಮಟ್ಟದಲ್ಲಿ Rank ಗಳನ್ನು ಪಡೆದಿರುವ ನಮ್ಮ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪ್ರತಿಭಾ ಪುರಸ್ಕಾರ ಯೋಜನೆಯಡಿಯಲ್ಲಿ ಬಹುಮಾನ ಪಡೆಯಲು ಅರ್ಹರಾಗಿರುತ್ತಾರೆ. 7ನೇ ತರಗತಿಯಲ್ಲಿ 90% ಅಂಕಗಳನ್ನು ಪಡೆದಿರುವವರೂ, SSLCಯಲ್ಲಿ 85% ಮತ್ತು ಅಧಿಕ ಅಂಕಗಳನ್ನು ಪಡೆದಿರುವವರು ಮತ್ತು ಮಿಕ್ಕ ಪರೀಕ್ಷೆಗಳಲ್ಲಿ ಮೊದಲನೇ 10 Rankಗಳಲ್ಲಿ ಸೇರಿರುವವರು ಮತ್ತು P.hd. ಪಡೆದಿರುವವರೂ ಅರ್ಹರಾಗಿರುತ್ತಾರೆ.

ಈ ಬಹುಮಾನ ಯೋಜನೆಗೆ ಅರ್ಜಿಯನ್ನು ನಮ್ಮ ಸಂಘದ ಕಾರ್ಯಾಲಯಕ್ಕೆ ಸಲ್ಲಿಸಬೇಕು. ಅರ್ಜಿಯನ್ನು ಪ್ರತ್ಯೇಕ ಬಿಳಿ ಹಾಳೆಯಲ್ಲಿ ಕಳುಹಿಸಬಹುದು. ಪೂರ್ಣವಾಗಿ ಭರ್ತಿ ಮಾಡಲ್ಪಟ್ಟ ಅರ್ಜಿಗಳನ್ನು ತಾ|| 12.01.05ರ ಒಳಗೆ ಕಾರ್ಯಾಲಯಕ್ಕೆ ಕಳುಹಿಸಬೇಕಾಗಿ ಕೋರಲಾಗಿದೆ. ಅರ್ಜಿಯ ಜೊತೆಯಲ್ಲಿ ವಿದ್ಯಾ ಇಲಾಖೆಯವರಿಂದ ಪಡೆದಿರುವ ರ್‍ಯಾಂಕ್ ವಿಶ್ವವಿದ್ಯಾನಿಲಯ ಸರ್ಟಿಫಿಕೇಟ್ ಮತ್ತು ತೇರ್ಗಡೆಯಾದ ಪರೀಕ್ಷೆಯ ಅಂಕಪಟ್ಟಿ ಇವುಗಳನ್ನು ಕಳುಹಿಸಬೇಕು.





# ಬೆಟ್ಟದಪುರ ಸಂಕೇತಿ ಸಂಘ (ರಿ.)

**ಕೊಠಡಿ ನಂ. 12, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ**
**ಎನ್.ಆರ್. ಕಾಲೋನಿ, ಬೆಂಗಳೂರು - 560 019**

## ಪ್ರತಿಭಾ ಪುರಸ್ಕಾರ ಯೋಜನೆ
## ಬಹುಮಾನಕ್ಕೆ ಅರ್ಜಿ ಪತ್ರ

1. ಅಭ್ಯರ್ಥಿಯ ಹೆಸರು
   ಮತ್ತು ವಯಸ್ಸು

2. ತಂದೆ/ತಾಯಿ ಅಥವಾ ಪೋಷಕರ
   ಹೆಸರು ಮತ್ತು ವಿಳಾಸ :

3. ಅಭ್ಯರ್ಥಿಯ ರ್‍ಯಾಂಕ್ ಪಡೆದ ವಿವರ
   1. ತರಗತಿ ಮತ್ತು ಇಸವಿ
   2. ಶಾಲೆ / ಕಾಲೇಜಿನ ಹೆಸರು
   3. ಅಭ್ಯರ್ಥಿಯು ಪಡೆದ ರ್‍ಯಾಂಕ್
   4. ರ್‍ಯಾಂಕ್ ಸರ್ಟಿಫಿಕೇಟ್ ಲಗತ್ತಿಸಿದೆಯೇ
   5. ಅಂಕಪತ್ರ ಲಗತ್ತಿಸಿದೆಯೇ ?

4. ಇತರ ವಿವರಗಳು

ಮೇಲ್ಕಂಡ ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದೆಯೆಂದು ಹೇಳುತ್ತೇನೆ.

ತಂದೆ/ತಾಯಿ/ಪೋಷಕರ ಸಹಿ ಅಭ್ಯರ್ಥಿಯ ಸಹಿ

ಸ್ಥಳ : ತಾ||

## ಕಾಶೀಯಾತ್ರೆ - ಮತ್ತೂರು ಕೃಷ್ಣಮೂರ್ತಿಗಳೊಂದಿಗೆ

...... ಕಳೆದ ಸಂಚಿಕೆಯಿಂದ

ಬುದ್ಧಗಯಾ, ಗಯಾಕ್ಷೇತ್ರದಿಂದ ಕೇವಲ 8 ಮೈಲುಗಳಷ್ಟುದೂರದಲ್ಲಿದೆ. ಸಂಜೆ 5 ಗಂಟೆಗೆ ಗಯಾದಿಂದ ಹೊರಟು ಬುದ್ಧಗಯಾಕ್ಕೆ ಬಂದೆವು. ನಾವು ಹೋದ ಸಂದರ್ಭದಲ್ಲಿ ಬುದ್ಧೋತ್ಸವ 2002 ನಡೆಯುತ್ತಿತ್ತು. ಎಲ್ಲೆಲ್ಲಿ ನೋಡಿದರೂ 'ಶ್ರೀ ದಲೈಲಾಮಾರಿಗೆ ಸ್ವಾಗತ' ಎಂದು ನಾನಾ ರೀತಿಯ ಬಣ್ಣ ಬಣ್ಣದ ಬ್ಯಾನರ್‌ಗಳನ್ನು ತೂಗು ಹಾಕಿದ್ದರು. ಅನಾರೋಗ್ಯದ ಕಾರಣದಿಂದ ಶ್ರೀ ದಲೈಲಾಮ ಅಲ್ಲಿಗೆ ಬರಲಿಲ್ಲ. ಸುಮಾರು 4 ಲಕ್ಷ ಜನರು ಈ ಉತ್ಸವಕ್ಕೆ ಬಂದಿದ್ದರು. ಪರಿಸರ ಮಾಲಿನ್ಯವಾಗುವುದೆಂದು ಮುಂಜಾಗ್ರತಾ ಕ್ರಮವಾಗಿ ಊರಿನ ಒಳಕ್ಕೆ ಲಾರಿ ಬಸ್ಸುಗಳನ್ನು ಬಿಡುತ್ತಿರಲಿಲ್ಲ. ನಮ್ಮ ಬಸ್ಸನ್ನು ಊರ ಹೊರಗೇ ನಿಲ್ಲಿಸಿ, ನಾವೆಲ್ಲಾ ಸೈಕಲ್‌ರಿಕ್ಷಾದಲ್ಲಿ ದೇವಸ್ಥಾನದ ಹತ್ತಿರಕ್ಕೆ ಹೋದೆವು. ನಾವು ಹೊರಗಿನಿಂದ ಬೋಧಿಕೆರೆಯನ್ನು ನೋಡಿದೆವು. ಇಲ್ಲಿ ಆದಿಶೇಷನಂತೆ ಇರುವ ಹಾವಿನ ಹೆಡೆಯ ಕೆಳಗೆ ಬುದ್ಧ ಧ್ಯಾನಾಸಕ್ತನಾಗಿರುವ ವಿಗ್ರಹ ಇದೆ. ಆ ಜನಸಂದಣಿ, ಆ ನೂಕುನುಗ್ಗಲು ಒಂದು ರೋಮಾಂಚನ ಅನುಭವ ಬಹುಶಃ ನೀವೂ ಕೂಡ ಪರೋಕ್ಷವಾಗಿ ನಮ್ಮೊಡನೆ ಸಂತೋಷ ಪಡುತ್ತಿದ್ದೀರಾ ! ಈ ಆನಂದದ ಅನುಭವ ಮೈನವಿರೇಳುವಂಥದ್ದು. ಆ ಬೋಧಿವೃಕ್ಷವನ್ನು ನೋಡುತ್ತಾ ಇದ್ದರೆ ನಮ್ಮನ್ನು ಯಾವುದೋ ಒಂದು ಪ್ರಪಂಚಕ್ಕೆ ಕರೆದುಕೊಂಡು ಹೋದ ಅನುಭವ. ಭಗವಾನ್ ಬುದ್ಧನಿಗೆ ಜ್ಞಾನೋದಯವಾದ ಬೋಧಿವೃಕ್ಷದ ಕೆಳಗೆ ನಾವೆಲ್ಲಾ, ಆ ವೃಕ್ಷವನ್ನು ಮುಟ್ಟಿಕೊಂಡು ಪ್ರಾರ್ಥಿಸುತ್ತಿದ್ದೇವೆಂಬುದನ್ನು ಒಂದು ಕ್ಷಣ ಆಲೋಚಿಸಿದರೆ, ನಮಗೆ ದೊರಕುವ ಅನುಭವವೇ ಬೇರೆ. ನಮಗೆ ಯಾವುದೋ ಒಂದು ಸಂತೋಷವನ್ನು ಬೋಧಿವೃಕ್ಷ ಕೊಡುತ್ತಿದೆಯೇನೋ ಎಂದು ಅನ್ನಿಸುತ್ತದೆ. ಧಾರ್ಮಿಕತೆಯಲ್ಲಿ ಸ್ಥಾನ ಪಡೆದ ಅಶ್ವತ್ಥವೃಕ್ಷದ ಬಗ್ಗೆ ನಾವು ತಿಳಿದುಕೊಳ್ಳೋಣ.

ಮನುಷ್ಯನಿಗೆ ನಂಬಿಕೆಯೊಂದಿದ್ದರೆ, ಆತ ಮನುಷ್ಯನಲ್ಲೇ ಏಕೆ ಕಲ್ಲಿನಲ್ಲಿ,





ನೀರಿನಲ್ಲಿ, ವಿವಿಧ ಭಾವಚಿತ್ರಗಳಲ್ಲಿ, ಪುಸ್ತಕಗಳಲ್ಲಿ, ಪ್ರಾಣಿಪಕ್ಷಿಗಳಲ್ಲಿ ಸಿನಿಮಾ ತೋರಿಸುವ ಪರದೆಯಲ್ಲಿ ದೇವರನ್ನು ಕಾಣುತ್ತಾನೆ ಮತ್ತು ದೇವರೆಂದೇ ಪೂಜಿಸುತ್ತಾನೆ. ಕಷ್ಟ ಕಾರ್ಪಣ್ಯಗಳು ಎದುರಾದರಂತೂ ಇವೆಲ್ಲವುಗಳಿಗೆ ತಾನು ಬೇಸತ್ತಾಗ ಶರಣಾಗುತ್ತಾನೆ. ಹಾಗೆಯೇ ಈತನಲ್ಲಿ ಎಷ್ಟೇ ವೈಜ್ಞಾನಿಕ ಭಾವನೆ ಬೆಳೆದರೂ, ನಿಸರ್ಗದಲ್ಲಿ ಕಂಡುಬರುವ ಗಿಡಮರಗಳನ್ನು ಪೂಜಿಸುವ ಪರಿಪಾಠವನ್ನು ಇಂದಿಗೂ ತಾನು ಬೆಳೆಸಿಕೊಂಡಿದ್ದಾನೆ. ಕೆಲವು ಗಿಡಮರಗಳು ತನ್ನ ಶತಮಾನಗಳ ಧಾರ್ಮಿಕ ಪವಿತ್ರತೆಗಳಿಂದಾಗಿ ಮತ್ತು ಇವುಗಳು ದೀರ್ಘವಾದ ಧಾರ್ಮಿಕ ಇತಿಹಾಸಗಳನ್ನೇ ಕಂಡು ಕೊಂಡಿರುವುದರಿಂದಾಗಿ ಮನುಷ್ಯನನ್ನೇ ತನ್ನೆಡೆಗೆ ಸೆಳೆದು, ಆ ಮೂಲಕ ತಮ್ಮ ಆಧ್ಯಾತ್ಮಿಕತೆಯ ಸುಗಂಧವನ್ನು ಹೊರಸೂಸುತ್ತವೆ. ಅಂತಹ ಪೂಜ್ಯಭಾವನೆಯ ಒಂದು ವೃಕ್ಷವೆಂದರೆ ಅದು ಅಶ್ವತ್ಥವೃಕ್ಷ.

ಈ ಮರಕ್ಕೆ ಅಶ್ವತ್ಥವಲ್ಲದೆ ಅರಳಿ, ಪಿಪ್ಪಲ, ಚಲಪತ್ರ, ಕ್ಷೀರದ್ರುಮ, ಗಭಭಕ್ಷಕ ಮೊದಲಾದ ಹೆಸರುಗಳಿವೆ. ಶ್ರೀ ಭಗವದ್ಗೀತೆಯಲ್ಲಿ ವೃಕ್ಷಗಳಲ್ಲಿ ನಾನು ಅಶ್ವತ್ಥ ಎಂಬುದಾಗಿ ಶ್ರೀ ಕೃಷ್ಣನು ಅದರ ಪಾವಿತ್ರತೆಯನ್ನು ಕೊಂಡಾಡಿದ್ದಾನೆ. ವೃಕ್ಷರಾಜ, ವಿಷ್ಣುರೂಪಿ ಎಂದು ಮುಂತಾಗಿ ಈ ವೃಕ್ಷವನ್ನು ಕರೆಯುವುದುಂಟು. ಈ ವೃಕ್ಷವನ್ನು ಕಡಿಯುವುದು ಮಹಾ ಪಾಪವೆಂತಲೂ, ಬ್ರಹ್ಮಹತ್ಯೆಗೆ ಸಮವೆಂತಲೂ ಹೇಳಲಾಗಿದೆ. ನಾಗಪ್ರತಿಷ್ಠೆ, ಪೂಜೆ, ಪುರಾಣ, ಉತ್ಸವ, ಹರಟೆ ಎಲ್ಲವನ್ನು ಇದರಡಿಯಲ್ಲಿ ನಡೆಸುವುದರಿಂದ ಊರಿನಲ್ಲಿರುವ ಅಶ್ವತ್ಥ ಕಟ್ಟೆಯೆಂದರೆ ಬಹಳ ವಿಶೇಷತೆ. ಅದರ ಎದುರು ಹೇಸಿಗೆ, ಮೈಲಿಗೆ ಸಲ್ಲದು. ಶುಚಿ ದ್ರುಮ ಅಥವಾ ಮರವೆಂದೇ ಇದು ಪುರಾಣ ಪ್ರಸಿದ್ಧಿ. ಅರಳಿ, ಆಲ, ಅತ್ತಿ ಈ ಮೂರು ಮರಗಳು ಪೂಜಾ ವಿಶೇಷತೆಯನ್ನು ಪಡೆದುಕೊಂಡಿದ್ದು, ವಿಷ್ಣು ಸಹಸ್ರ ನಾಮದಲ್ಲಿ ದೇವರನ್ನು ಈ ಮೊದಲ ಹೆಸರುಗಳಿಂದ ಕರೆಯಲಾಗಿದೆ. ಮುತ್ತುಗ ವೃಕ್ಷವು ಕೂಡ ಈ ಅಶ್ವತ್ಥದೊಂದಿಗೆ ಪವಿತ್ರತೆಯನ್ನು ಪಡೆದುಕೊಂಡಿದೆ. ಇನ್ನು ಬೇವು, ಶಮೀ, ಬಿಲ್ವವೃಕ್ಷಗಳೂ ಕೂಡ ದೇವತಾ ಭಾವನೆಗಳನ್ನು ನಮ್ಮಲ್ಲಿ ಉಂಟು ಮಾಡುತ್ತವೆ. ಇವೆಲ್ಲವುಗಳಲ್ಲಿ ಅರಳಿಗೆ ಮುಖ್ಯ ಪಟ್ಟ ದೊರೆತದ್ದು

ಆಕಸ್ಮಿಕವೇನಲ್ಲ. ಚರಕ, ಶುಶ್ರುತ, ವಾಗ್ಭಟ ಮೊದಲಾದವರು ಇದರ ಗುಣಲಕ್ಷಣಗಳನ್ನು ಹಾಡಿ ಹೊಗಳಿದ್ದಾರೆ.

ಇನ್ನು ಈ ಸ್ಥಳದ ಬಗ್ಗೆ ತಿಳಿದುಕೊಳ್ಳೋಣ. ಉತ್ತರ ಭಾರತದ ಗಯಾ ಒಂದು ಪ್ರಾಚೀನ ತೀರ್ಥಕ್ಷೇತ್ರವಾಗಿದೆ. ಈ ನಗರವು ಒಂದು ಜಿಲ್ಲಾ ಕೇಂದ್ರವಾಗಿದೆ. ಇದು ಹಿಂದೂ ಮತ್ತು ಬೌದ್ಧರ ಪ್ರಮುಖ ಧಾರ್ಮಿಕ ಕ್ಷೇತ್ರವಾಗಿದೆ. ಅರಸನಾಗಿದ್ದ 29 ವರ್ಷದ ಸಿದ್ಧಾರ್ಥನು ಮನೆ ಬಿಟ್ಟು 6 ವರ್ಷಗಳು ಸನ್ಯಾಸಿಯಂತೆ ಅಲೆದು ವೈರಾಗ್ಯ ಹೊಂದಿ ಪ್ರಾಪಂಚಿಕ ಸುಖವನ್ನು ತ್ಯಜಿಸಿ ನೇರವಾಗಿ ಬಂದಿದ್ದು ಇಲ್ಲಿಗೆ. ಇದು ಅವನ ತಪಸ್ಸಿನ ಸಾಧನೆಯ ನೆಲೆ. ಹಲವಾರು ವರ್ಷಗಳ ಕಾಲ ನಡೆದಾಡಿದ ಪುಣ್ಯಭೂಮಿ. ಸಿದ್ಧಾರ್ಥನ ಜನ್ಮರಹಸ್ಯವನ್ನು ತಿಳಿದುಕೊಳ್ಳೋಣ. ಇಕ್ಷ್ವಾಕು ವಂಶದ ದೊರೆ ಶುದ್ಧೋಧನ. ಕಪಿಲವಸ್ತು ರಾಜಧಾನಿ, ರಾಣಿ ಮಾಯಾದೇವಿ ತನ್ನ ಹೆರಿಗೆಗಾಗಿ ತವರುಮನೆಯಾದ ದೇವದಾಹಕ್ಕೆ ಪಯಣಿಸುತ್ತಿದ್ದಾಗ, ದಾರಿಯಲ್ಲಿ ಲುಂಬಿಣಿ ಗ್ರಾಮದ ಉದ್ಯಾನವನದಲ್ಲಿ ಗಂಡುಮಗುವಿಗೆ ಜನ್ಮವಿತ್ತಳು. ಅಂದೇ ಪೂರ್ಣಿಮೆ. ಪೂರ್ಣಚಂದ್ರ ತೇಜಸ್ವಿಯಾದ ಆ ಮಗುವೇ ಸಿದ್ಧಾರ್ಥ. ಆದರೆ ಮಗು ಏಳನೇ ದಿನದಲ್ಲಿ ತನ್ನ ತಾಯಿಯನ್ನು ಕಳೆದುಕೊಂಡು ಮಾಯಾದೇವಿಯ ತಂಗಿಯಾದ ಗೌತಮಿಯು (ರಾಜನ ದ್ವಿತೀಯ ಪತ್ನಿ) ಸಲುಹಿದ್ದರಿಂದ ಗೌತಮ ಎಂದೂ ಕರೆದರು. ಕುಲಗುರು ಆಸಿತಮುನಿ ನುಡಿದ ಭವಿಷ್ಯದಂತೆ ಮಗನು ಸನ್ಯಾಸಿಯಾಗಬಹುದೆಂದು ತಿಳಿದು, ಯಾವ ತರಹದ ಕಷ್ಟ, ದುಃಖ, ನೋವು, ಸಂಕಟ ಕಣ್ಣಿಗೆ ಬೀಳದಂತೆ ಎಚ್ಚರವಹಿಸಿ ರಾಜ ಬೆಳೆಸುತ್ತಾನೆ. ಪ್ರಾಪ್ತವಯಸ್ಸಾದಂತೆ ಶಿಕ್ಷಣ ಕೊಡಿಸಿದ ನಂತರ, ಪ್ರಾಪ್ತವಯಸ್ಸಿಗೆ ಬಂದ ನಂತರ ಯಶೋಧರೆಯೊಡನೆ ಮದುವೆಯಾಗುತ್ತದೆ. ನಂತರ ಮಗು ರಾಹುಲನ ಜನನವಾಗುತ್ತದೆ. ಆದರೆ ವಿಧಿಯ ಆಟವೇ ಬೇರೆಯಾಗಿರುತ್ತದೆ. ಒಂದು ದಿನ ನಗರದರ್ಶನಕ್ಕೆ ತೆರಳಿದಾಗ, ರೋಗಿ, ವೃದ್ಧ ಮತ್ತು ಮೃತ ದೇಹವನ್ನು ನೋಡಿ, ಕಾರಣವನ್ನು ತಿಳಿದು, ಈ ಕಷ್ಟ ಕೋಟಲೆಗಳ ಜೀವನದಿಂದ ಮುಕ್ತಿ ಹೊಂದಲಿಕ್ಕಾಗಿ ಮತ್ತು ಉಳಿದವರಿಗೂ ಈ ಮಾರ್ಗವನ್ನು ತೋರಿಸಲಿಕ್ಕಾಗಿ





ಮಡದಿ, ಮಗು, ಅರಮನೆ ತ್ಯಜಿಸಿ ಸನ್ಯಾಸಿಯಾಗುತ್ತಾನೆ. ಸುಮಾರು 6 ವರ್ಷಗಳ ಕಾಲ ಆಹಾರ, ನಿದ್ರೆ, ತೊರೆದು ಉಗ್ರ ಸಂಯಮ, ಆತ್ಮ ನಿಗ್ರಹದಿಂದ ಕಠೋರ ತಪಸ್ಸನ್ನು ಆಚರಿಸುತ್ತಾನೆ. ದೇಹ ಅಸ್ಥಿಪಂಜರವಾಗುತ್ತದೆ. ದೇಹದಂಡನೆಯಿಂದ ಸಾಧ್ಯವಾಗದು ಎಂದು ಮನಗೊಂಡು ತಪಸ್ಸನ್ನು ನಿಲ್ಲಿಸಿ, ನೈರಾಂಜನ ನದಿಯಲ್ಲಿ ಮಿಂದು, ನೀರನ್ನು ಕುಡಿದು, ಅಲ್ಲಿಯ ರಾಜಕುಮಾರಿ ಸುಜಾತಳು ಕೊಟ್ಟ ಹಾಲು, ಆಹಾರವನ್ನು ಸೇವಿಸಿ, ಪುನಃ 7 ವಾರಗಳ ಕಾಲ ಬೋಧಿವೃಕ್ಷದ ಕೆಳಗೆ ಅಂತರ್‌ಮುಖಿಯಾಗಿ ಪದ್ಮಾಸನನಾಗಿ ಧ್ಯಾನದಲ್ಲಿ ಕುಳಿತನು. ಅಂದು ವೈಶಾಖ ಶುದ್ಧಪೂರ್ಣಿಮೆ. ಪೂರ್ಣಚಂದ್ರ ಪೂರ್ವ ದಿಗಂತದಲ್ಲಿ ಮೇಲೇರಿ ಬರುತ್ತಿದ್ದಂತೆ ಮೊದಲನೇ ಜಾವದಲ್ಲಿ ಶಾಕ್ಯಮುನಿಗೆ ತನ್ನ ಜನ್ಮ ಜನ್ಮಾಂತರಗಳ ಅರಿವಾಯಿತು. ಎರಡನೇ ಜಾವದಲ್ಲಿ ನಿತ್ಯಾನಿತ್ಯ ವಸ್ತುಗಳ ವಿವೇಕೋದಯವಾಯಿತು. ಮೂರನೇ ಜಾವದಲ್ಲಿ ಭಯ ದುಃಖಗಳ ಕಾರಣದ ಅರಿವಾಯಿತು. ಅರುಣೋದಯದ ವೇಳೆಗೆ ಆತನಿಗೆ ಪರಮ ಸತ್ಯ, ಸಮ್ಯಕ್ ಜ್ಞಾನದ ಅಮೃತತ್ವದ ಬೋಧಿಯಾಗಿ ಪೂರ್ಣ ಜ್ಞಾನದ ಸಾಕ್ಷಾತ್ಕಾರವಾಯಿತು. ಗೌತಮನು ಬುದ್ಧನಾಗುತ್ತಾನೆ.

(ಮುಂದುವರಿಯುವುದು)

**ಆರ್. ಎಸ್. ಕಾಶೀಪತಿ**
ಕುಶಾಲನಗರ

**ವಿಳಾಸ ಬದಲಾವಣೆ**

**ಬಿ. ಎಸ್. ಶಾಂತಾರಾಂ, ವಿನೋದಿನಿ**
**ಬಿ. ಎಸ್. ಪ್ರಕಾಶ, ಲೀಲಾವತಿ**
Sumukha Nivas, Flat No. 1104, Block No. 1,
Janapriya Bharath Enclave, Magadi Main Road,
Sunkadakatte, Bangalore - 560 091

## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.

ನಮ್ಮ ಕರೆಗೆ ಓಗೊಟ್ಟು ಈ ತಿಂಗಳು ಸ್ಪಂದಿಸಿದ ಮಾನ್ಯ ಬಾಂಧವರು

**ಬಿ. ಎಂ. ವೆಂಕಟರಾಮಯ್ಯ** — **ಪೋಷಕರು**

**ಬಿ. ಎಸ್. ರಾಮಚಂದ್ರ** — **ಪೋಷಕರು**





## Bettadapura Sankethi Sangha (R.), Bangalore
## List of Students for Loan Scholarships for the year 2004 - 2005

| Sl. No. | Name | Parent's Name | Place | Standard | Scholarship Amount |
|---|---|---|---|---|---|
| 1. | Sumukha Narayan S.R. | Raghunath S.N | Bangalore | BE Final | 4000 |
| 2. | Madhuranath H.S | Subbanna H.K | Bangalore | BE II Sem | 4000 |
| 3. | Sowmya S.A | Ananthanarayan S.C | Bangalore | BE VI Sem | 4000 |
| 4. | Bharath Bhardwaj | Srinivas R.L | Bangalore | BE I Sem | 4000 |
| 5. | M. Karthik | Mukund N. Rao | Bangalore | BE III Sem | 4000 |
| 6. | Srikanth R. N | Nagaraja R.S | Mysore | BE VII Sem | 4000 |
| 7. | B.M. Naveen | B.V. Muralidhara | Bangalore | MBA | 4000 |
| 8. | Sunil R.A | Ananda Ram R.S | Bangalore | MBBS II | 4000 |
| 9. | Pooja Mahesh | Jyothirmahesh R.S. | Bangalore | BE III Sem | 4000 |
| 10. | Vijay R. Gadwal | Prasanna Gadwal B.V | Mysore | BE V Sem | 4000 |
| 11. | Karthik P. | Prabhashankar Rao B.S | Bangalore | BE V Sem | 4000 |
| 12. | Karthik. J | B.S. Jagannath | Bangalore | BE I Sem | 4000 |

**ಸಮಸ್ತ ಸಂಕೇತಿ ಬಂಧುಗಳಿಗೆ**
**ಸಂಕ್ರಾಂತಿ ಹಬ್ಬದ ಶುಭಾಶಯಗಳು**

★★★★★

**ಸಂಕ್ರಾಂತಿ ಹಬ್ಬದ ಎಳ್ಳು ಮತ್ತು ಸಕ್ಕರೆ ಅಚ್ಚುಗಳಿಗಾಗಿ ಸಂಪರ್ಕಿಸಿ :**

**ರತ್ನ ಸಂಕೇತಿ ಹೋಂ ಪ್ರಾಡಕ್ಟ್ಸ್**

**ನಂ. 72, ''ಹರಿಪ್ರಿಯ'', ಕೃಷ್ಣಯ್ಯ ಲೇಔಟ್, ಬನಶಂಕರಿ 3ನೇ ಹಂತ,**
**ಇಟ್ಟಮಡು, ಬೆಂಗಳೂರು – 560 085.**

**ದೂರವಾಣಿ : 57605087 ಮೊಬೈಲ್ : 98440 19280**

*With Best Compliments From :*

**Swathi Industrial Suppliers**

★★★★★

**Office :** No. 17/1, 2nd Floor, Abbasi Manzil,
V.R.N. Lane, S. P. Road,
Bangalore - 560 002.
Phone : 51249570, Telefax : 22234352

**Residence :** 002C, 60-83, Debonair Residency,
Ramarao Layout, Kathriguppe,
BSK 3rd Stage, Bangalore - 560 085.
Phone : 26697141







**Horoscope - Reading and Palm Reading**

**Horoscope are calculated on the basis of sidereal system**

Predictions will be given through
planetory aspects.

**Just give your Name, Date of Birth,**
**Birth Time, Weekday and Birth Place.**

***For details contact :***

**H. K. SATYAPRAKASH**
**S/o. H. S. Krishna Murthy**
**Grandson of Javaraya Meshtru of Hanasoge**

**Grandson of Late Rudrapatna Srinivasaiah**

Advocate - Channapatna

**NATURE CURE CONSULTANT**

**DO YOU WANT TO GET RID OF TENSION, ACIDITY, GASTRIC TROUBLE ETC...**

**Stop eating "POLISHED RICE" start eating "UNPOLISHED RICE" and be free from all types of diseases including blood sugar and blood pressure.**

**Stop pouring the hard earned money to Doctors.**
**Be Healthy for ever.**

**ಪ್ರಕೃತಿ ಚಿಕಿತ್ಸಾ ಸಲಹೆಗಳಿಗೆ ಸಂಪರ್ಕಿಸಿ :**

**H. K. SATYAPRAKASH**
No. 146, Raghavendra Block, 15th Main Road,
Kalidasa Layout, Near Raghavendra Mutt,
Srinagar, Bangalore - 560 050.

**Cell No. :**
**9886334667, 9844125411, 9845994578**